RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**


| ಭಾಗ-III | ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೮ (ಶ್ರಾವಣ ೯, ಶಕ ವರ್ಷ ೧೯೪೦) | ನಂ. ೧೧೭೦ |
|---|---|---|
| Part-III | Bengaluru, Tuesday, July 31, 2018 (Shravana 9, Shaka Varsha 1940) | No. 1170 |


ನಗರಾಭಿವೃದ್ಧಿ ಇಲಾಖೆ

ಅಧಿಸೂಚನೆ

**ಸಂಖ್ಯೆ:ನಅಇ 57 ಎಂಎಲ್‌ಆರ್ 2018(1), ಬೆಂಗಳೂರು, ದಿನಾಂಕ: 30-07-2018**

ಸರ್ಕಾರದ ಮಾರ್ಗಸೂಚಿ ಸಂಖ್ಯೆ: ನಅಇ 240 ಎಂಎಲ್‌ಆರ್ 2013 ದಿನಾಂಕ:18.12.2013 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ:ನಅಇ 21 ಎಂಎಲ್‌ಆರ್ 2016 ದಿನಾಂಕ:09.02.2016ರಲ್ಲಿ ಸ್ಪಷ್ಟಪಡಿಸಿರುವಂತೆ, ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 13 ರನ್ವಯ (Karnataka Act 22 of 1964) ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 13 ಶಾಸನ 2012, ಬೆಂಗಳೂರು, ದಿನಾಂಕ:30.08.2012 ರನ್ವಯ (Karnataka Act No. 32 of 2012) ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಮಡಿಕೇರಿ ನಗರಸಭೆಯ ವಾರ್ಡುವಾರು ಮೀಸಲಾತಿಯನ್ನು ನಿಗಧಿಪಡಿಸಿ ಕರಡು ಅಧಿಸೂಚನೆಯನ್ನು ಕರ್ನಾಟಕ ವಿಶೇಷ ರಾಜ್ಯ ಪತ್ರ ಭಾಗ-III, ದಿನಾಂಕ:25.05.2018 ರಂದು ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 7 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತ ಮೂಲಕ ಸಲ್ಲಿಸಲು ಆಹ್ವಾನಿಸಲಾಗಿತ್ತು.

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿದೆ.

ನಿಗಧಿತ ಅವಧಿಯಲ್ಲಿ ಕೆಲವೊಂದು ಸಲಹೆಗಳು/ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಸದರಿ ಸಲಹೆ/ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿದೆ.

ಕರ್ನಾಟಕ ಪುರಸಭೆ ಕಾಯ್ದೆ 1964 ರ ಕಲಂ 13ರನ್ವಯ (Karnataka Act 22 of 1964) ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು **ಕೊಡಗು ಜಿಲ್ಲೆಯ ಮಡಿಕೇರಿ ನಗರಸಭೆಯ** ವಾರ್ಡುಗಳ ಮೀಸಲಾತಿಯನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ.

1. **ಮಡಿಕೇರಿ ನಗರಸಭೆಯ** ವಾರ್ಡುಗಳ ಸಂಖ್ಯೆ: **23 (ಇಪ್ಪತ್ಮೂರು)**
2. ಪ್ರತಿ ವಾರ್ಡುಗಳ ವ್ಯಾಪ್ತಿಯ ವಿವರಗಳನ್ನು ಅನುಬಂಧದ ಕಲಂ 3 ರಲ್ಲಿ ಸ್ಪಷ್ಟಪಡಿಸಲಾಗಿದೆ.
3. ಪ್ರತಿ ವಾರ್ಡಿಗೆ ತಲಾ ಒಂದು ಸ್ಥಾನವನ್ನು ಮೀಸಲಿಡಲಾಗಿದೆ.
4. ಪ್ರತಿ ವಾರ್ಡಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ/ ಸಾಮಾನ್ಯ ಸ್ಥಾನವನ್ನು ಮತ್ತು ಆಯಾ ವರ್ಗದ ಮಹಿಳೆಯರ ಸ್ಥಾನವನ್ನು ಅನುಬಂಧದ ಕಲಂ 4 ರಲ್ಲಿ ನಿಗದಿಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ಎಲ್. ಬಾಗಲವಾಡೆ**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಅನುಬಂಧ

ಮಡಿಕೇರಿ ನಗರಸಭೆ

| ಕ್ರ ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| 1 | **ಮಡಿಕೇರಿ–1**<br><br>(ಬ್ಲಾಕ್ ನಂ 14 ಮತ್ತು 9 ಭಾಗಶಃ ವಿದ್ಯಾನಗರ, ಗಾಳಿಬೀಡು ರಸ್ತೆ, ಐ.ಟಿ,ಐ. ಹಿಂಭಾಗ, ಭಗವತಿ ನಗರ ಭಾಗಶಃ) | ಸೀನಿಯರ್ ಕಾಲೇಜು ಹಿಂಭಾಗ ವಿದ್ಯಾನಗರ ರಸ್ತೆಗೆ ಇಳಿದು ಸದ್ರಿ ವಿದ್ಯಾನಗರ ರಸ್ತೆಯ ಎಡಬದಿ ಮನೆಗಳು ಸೇರಿ ತೋಡಿನ ಸರಹದ್ದಿನಲ್ಲೇ ಮುಂದುವರಿದು ಗಾಳಿಬೀಡು ರಸ್ತೆಗೆ ಸೇರಿಸಿಕೊಂಡು ಗಾಳಿಬೀಡು ರಸ್ತೆಯಿಂದ ಗಾಲ್ಫ್‌ಗ್ರೌಂಡ್‌ಗೆ ಹೋಗುವ ರಸ್ತೆಯಲ್ಲಿ ಮುಂದುವರೆದು ಪೂರ್ಣ ವಿದ್ಯಾನಗರ ಆವರಿಸಿಕೊಂಡು ನಗರಸಭೆ ಸರಹದ್ದಿನ ಮೂಲಕ ವಾಪಾಸು ಬಂದು ತೋಡಿನ ಬದಿಯಲ್ಲೇ ಮುಂದುವರೆದು ಶ್ರೀ ಎ.ಎ. ಪೂವಯ್ಯರವರ ಮನೆ ಬದಿಗಾಗಿ ಪುನಃ ವಿದ್ಯಾನಗರದ ಪ್ರಾರಂಭದ ಸ್ಥಳಕ್ಕೆ ಸೇರುವುದು. ಭಗವತಿ ನಗರದ ಶ್ರೀ ಕೊರಗಪ್ಪ ರೈ ಮನೆಯಿಂದ ಹೊರಟು ದೇವಸ್ಥಾನದವರೆಗೆ ಹೋಗಿ ಅಲ್ಲಿಂದ ಎಡಬಲ ಕಾನ್ವೆಂಟ್ ಗಾಳಿಬೀಡು ರಸ್ತೆಗಾಗಿ ವೈಭವ ಮನೆ ಸೇರಿ ಮುಂದುವರಿದು ಬಾಳೇಡ ಪೂವಣಿ ಮನೆ ಸೇರಿ ಕಾಲೇಜಿನ ಹಿಂಬದಿ ರಸ್ತೆಗಾಗಿ ತೋಡಿನ ಸರಹದ್ದಿನಿಂದ ಸರಹದ್ದಿನ ಮೂಲಕ ವಿದ್ಯಾನಗರ ರಸ್ತೆಗೆ ಹತ್ತುವ ಜಂಕ್ಷನ್ ರಸ್ತೆಗೆ ಬಂದು ಸೀನಿಯರ್ ಕಾಲೇಜು ಸೇರಿ ಎಡಭಾಗದ ಪ್ರದೇಶ ಸೇರಿ ಕೆನರಾ ಬ್ಯಾಂಕ್ ಜಂಕ್ಷನ್‌ವರೆಗೆ ಬಂದು ಮೋಹನ್ ಮೊಣ್ಣಪ್ಪನವರು ಇರುವ ಹೌಸಿಂಗ್ ಬೋರ್ಡ್ ಕಾಲೋನಿ ಎಡಭಾಗ ಮಾತ್ರ ಸೇರಿ ಸಿದ್ದಂಡ ಕಾಳಪ್ಪ ಮನೆ ಸೇರಿ ಬಲಭಾಗಕ್ಕೆ ತಿರುಗಿ ಕಾಲುದಾರಿ ಮೂಲಕ ಹೊರಟ ಸ್ಥಳ ಸೇರುವುದು.<br><br>**ಉತ್ತರಕ್ಕೆ** : ವಾರ್ಡ್ ನಂ 2<br>**ದಕ್ಷಿಣಕ್ಕೆ** : ವಾರ್ಡ್ ನಂ 19<br>**ಪೂರ್ವಕ್ಕೆ** : ವಾರ್ಡ್ ನಂ 17<br>**ಪಶ್ಚಿಮಕ್ಕೆ** : ನಗರಸಭಾ ಸರಹದ್ದು, ಕೆ.ನಿಡುಗಣೆ ಗ್ರಾಮ ಪಂಚಾಯಿತಿ | ಸಾಮಾನ್ಯ |
| 2 | **ಮಡಿಕೇರಿ–2**<br><br>(ಬ್ಲಾಕ್ ನಂ.9 ಮತ್ತು 8 ಭಾಗಶಃ ಕಾವೇರಿ ಬಡಾವಣೆ, ಭಗವತಿ ನಗರ ಭಾಗಶಃ, ಕಾನ್ವೆಂಟ್ ರಸ್ತೆ) | ಮುತ್ತಪ್ಪ ದೇವಸ್ಥಾನ ಕಾನ್ವೆಂಟ್ ಜಂಕ್ಷನ್‌ನಿಂದ ಅಬ್ಬಿಫಾಲ್ಸ್ ರಸ್ತೆಯಲ್ಲಿ ಭಗವತಿನಗರ ರಸ್ತೆ ಜಂಕ್ಷನ್‌ಗೆ ತಲುಪಿ ಕೊರಗಪ್ಪ ರೈ ಮನೆ ಸೇರಿಕೊಂಡು ಭಗವತಿನಗರ ಮುಖ್ಯ ರಸ್ತೆಗೆ ಸೇರಿ ಎಡಕ್ಕೆ ತಿರುಗಿ ಅಲ್ಲಿಂದ ಎಡಬಲ ಸೇರಿ ರಸ್ತೆಗೆ ತಲುಪಿ ಅಜಿಮ್ ಮನೆ ಮತ್ತು ಅಕ್ಕಪಕ್ಕದ ಮನೆ ಸೇರಿ ಹೌಸಿಂಗ್ ಬೋರ್ಡ್ ಸೇರಿಕೊಂಡು ಕಾನ್ವೆಂಟ್ ರಸ್ತೆಯಲ್ಲಿಯೇ ಬಂದು ಎಡಭಾಗದ ಪ್ರದೇಶ ಮಾತ್ರ ಸೇರಿ ಕೊಂಡು ಕಾವೇರಿ ಲೇಔಟ್ ಸೇರಿ ಕಾವೇರಿ ಲೇಔಟ್ ತೋಡಿನ ಸರಹದ್ದಿನಲ್ಲೇ ಮುತ್ತಪ್ಪ ದೇವಾಲಯ ಜಂಕ್ಷನ್‌ಗೆ ಬಂದು ಪ್ರಾರಂಭದ ಸ್ಥಳಕ್ಕೆ ಸೇರುವುದು.<br><br>**ಉತ್ತರಕ್ಕೆ** : ವಾರ್ಡ್ ನಂ 3<br>**ದಕ್ಷಿಣಕ್ಕೆ** : ವಾರ್ಡ್ ನಂ 17<br>**ಪೂರ್ವಕ್ಕೆ** : ವಾರ್ಡ್ ನಂ 9<br>**ಪಶ್ಚಿಮಕ್ಕೆ** : ವಾರ್ಡ್ ನಂ 1 | ಹಿಂದುಳಿದ ವರ್ಗ (ಎ) ಮಹಿಳೆ |

| ಕ್ರ. | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| 3 | **ಮಡಿಕೇರಿ–3**<br><br>(ಬ್ಲಾಕ್ ನಂ 24 ಭಾಗಶಃ, ಗದ್ದಿಗೆ ಭಾಗಶಃ, ತ್ಯಾಗರಾಜ ಕಾಲೋನಿ, ಎ.ವಿ ಶಾಲೆ ಹಿಂಭಾಗ) | ಗದ್ದಿಗೆಯಲ್ಲಿ ಟೀಚರ್ ಮನೆ (ಎಡಬದಿ) ಯಿಂದ ಪ್ರಾರಂಭಗೊಂಡು ಅದೇ ರಸ್ತೆಯಲ್ಲಿ ಮುಂದುವರಿದು ಶ್ರೀ ಎಂ.ಎಂ. ಇಬ್ರಾಹಿಂ ರವರ ಮನೆ ಸೇರಿಕೊಂಡು ಎಡಬದಿ ಎಲ್ಲಾ ಮನೆಗಳು ಸೇರಿ ಕಾಸಿಂ ಮನೆವರೆಗೆ ಹೋಗಿ ಅಲ್ಲಿಂದ ಎಡಬದಿ ಮಡಿಕೇರಿ ಸರಹದ್ದು ಮೂಲಕ ತ್ಯಾಗರಾಜ ಕಾಲೋನಿ ಎಲ್ಲಾ ದೂರದ ಪ್ರದೇಶದ ಎಲ್ಲಾ ಮನೆಗಳು ಸೇರಿಕೊಂಡು ಆಶ್ರಯ ಮನೆಗಳು ಶ್ರೀಮತಿ ಬೀಬಿ ಮನೆ ಕಡೆ ಬಂದು ಆ ಬದಿಯ ಪ್ರಕಾರ ಮನೆಗಳು ಸೇರಿಸಿಕೊಂಡು ನಗರಸಭೆ ಸರಹದ್ದು ಮೂಲಕ ಎಡಬದಿ ಪ್ರದೇಶ ಸೇರಿ ಜೆ.ಡಿ.ಸಿ. ಟ್ರೈನಿಂಗ್ ಸೆಂಟರ್ ಸೇರಿಕೊಂಡು ಮುತ್ತಪ್ಪ ದೇವಾಲಯ ಜಂಕ್ಷನ್‌ವರೆಗೆ ಬಂದು ಎ.ವಿ.ಶಾಲೆ ಹಿಂಬದಿ ರಸ್ತೆ ಎಡಬದಿಯ ಎಲ್ಲಾ ಮನೆಗಳು ಸೇರಿಕೊಂಡು ಶ್ರೀ ಎಸ್.ಸಿ. ಸುಬ್ರಮಣಿ ಮನೆ ಸೇರಿ ಮಾತಂಡ ದೇವಯ್ಯರವರು ಇದ್ದ ಮನೆಯಿಂದ ಗದ್ದಿಗೆ ರಸ್ತೆಯಲ್ಲಿ ಮುಂದುವರಿದು ಪ್ರಾರಂಭದ ಸ್ಥಳ ಸೇರುವುದು.<br><br>**ಉತ್ತರಕ್ಕೆ** : ನಗರಸಭೆ ಸರಹದ್ದು, ಕೆ.ನಿಡುಗಣೆ ಗ್ರಾಮ ಪಂಚಾಯಿತಿ<br>**ದಕ್ಷಿಣಕ್ಕೆ** : ವಾರ್ಡ್ ನಂ 9 ಮತ್ತು 8<br>**ಪೂರ್ವಕ್ಕೆ** : ವಾರ್ಡ್ ನಂ 4<br>**ಪಶ್ಚಿಮಕ್ಕೆ** : ವಾರ್ಡ್ ನಂ 2 | ಹಿಂದುಳಿದ ವರ್ಗ (ಬಿ) ಮಹಿಳೆ |
| 4 | **ಮಡಿಕೇರಿ–4**<br><br>(ಬ್ಲಾಕ್ ನಂ 24 ಭಾಗಶಃ, ಅಜಾದ್ ನಗರ, ಉಕ್ಕುಡ, ರಾಜರಾಜೇಶ್ವರಿ ನಗರ, ಸೋಮವಾರ ಪೇಟೆ ರಸ್ತೆ,) | ಗದ್ದಿಗೆ ಮಸೀದಿಯಿಂದ ಬಲಬದಿ ಆಮಿನ ಟೀಚರ್ ಮನೆವರೆಗೆ ಬಲಬದಿ ಮತ್ತು ಅಲ್ಲಿಂದ ಕಾಲುದಾರಿಗಾಗಿ ಬಲಬದಿಯ ಪ್ರದೇಶ ಸೇರಿ ಉಕ್ಕುಡಕ್ಕೆ ಕಾಲುದಾರಿಯಲ್ಲಿಯೇ ಮುಂದುವರಿದು ಅಝಾದ್‌ನಗರ ಸೇರಿ ಎಡ ಬಲಭಾಗ ಸೇರಿ ಅಡಿಕೆ ಇಬ್ರಾಹಿಂರವರ ಮನೆಗಳು ಸೇರಿ ಮುಂದುವರಿದು ಶ್ರೀಮತಿ ವೀಣಾ ಅಚ್ಚಯ್ಯ ರವರ ಮನೆ ಮುಂದಿನ ರಾಜೇಶ್ವರಿ ಶಾಲೆ ಸೇರಿ ಮುಂದಕ್ಕೆ ಎಡಕ್ಕೆ ತಿರುಗಿ ಸಿ.ಎಂ.ಸಿ. ಕ್ವಾಟ್ರಸ್ ಸೇರಿ ಸಂಪಿಗೆ ಕಟ್ಟೆ ರಸ್ತೆಯಲ್ಲಿ ಮುಂದುವರಿದು ಎಡಭಾಗದ ಪ್ರದೇಶ ಸೇರಿ ಸೋಮವಾರಪೇಟೆ ರಸ್ತೆ ನಗರಸಭೆ ಸರಹದ್ದುವರೆಗೆ. ರಾಜರಾಜೇಶ್ವರಿ ನಗರದ ಆಶ್ರಯ ಮನೆಗಳು ಎಡಬಲಕ್ಕಾಗಿ ಬಂದು ಗೋಪಾಲಕೃಷ್ಣ ಮನೆ ಸೇರಿ ಅಝಾದ್‌ನಗರ ವಾರ್ಡ್ ಉಕ್ಕುಡದ ಎಲ್ಲಾ ಪ್ರದೇಶ ಸೇರಿ ಅಝಾದ್‌ನಗರದಲ್ಲಿ ಪಿಗ್ಮಿ ಹಂಸರವರ ಮನೆ ಮುಂದಿನ ಕಾಲುದಾರಿಗಾಗಿ ಎಲ್ಲಾ ಮನೆಗಳನ್ನು ಸೇರಿ ಪ್ರಾರಂಭದ ಸ್ಥಳಕ್ಕೆ ಸೇರುವುದು.<br><br>**ಉತ್ತರಕ್ಕೆ** : ನಗರಸಭೆ ಸರಹದ್ದು, ಕೆ.ನಿಡುಗಣೆ ಗ್ರಾಮ ಪಂಚಾಯಿತಿ<br>**ದಕ್ಷಿಣಕ್ಕೆ** : ವಾರ್ಡ್ ನಂ 5<br>**ಪೂರ್ವಕ್ಕೆ** : ನಗರಸಭೆ ಸರಹದ್ದು, ಕೆ.ನಿಡುಗಣೆ ಗ್ರಾಮ ಪಂಚಾಯಿತಿ<br>**ಪಶ್ಚಿಮಕ್ಕೆ** : ವಾರ್ಡ್ ನಂ 3 | ಸಾಮಾನ್ಯ ಮಹಿಳೆ |

| ಕ್ರ ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| 5 | **ಮಡಿಕೇರಿ–5**<br><br>(ಬ್ಲಾಕ್ ನಂ 22, ಬ್ಲಾಕ್ ನಂ 21, ಭಾಗಶಃ 23, ದೇವಸ್ಥಾನ ರಸ್ತೆ, ದೇಚೂರು ಬಾಣೆ ಮೊಟ್ಟೆ, ಚೈನ್ ಗೇಟ್ ರಸ್ತೆ) | ಚಾಯ್ಸ್ ಹೊಟೇಲ್ ನಿಂದ ಹೈಮಾಸ್ಕ್ ಲೈಟ್‌ಗಾಗಿ ಖಾಸಗಿ ಬಸ್ ನಿಲ್ದಾಣ ಎದುರಿಗಾಗಿ ಅಂಚೆ ಕಛೇರಿ ರಸ್ತೆ ಬ್ರಹ್ಮಗಿರಿ ಪ್ರಸ್ ಹತ್ತಿರ ಇಳಿದು ಮೋಹನ್ ಸರ್ವಿಸ್ ಸ್ಟೇಷನ್ ಹತ್ತಿರ ಮೆಟ್ಟಿಲು ಹತ್ತಿ ಬಾಣೆಮೊಟ್ಟೆ ರಸ್ತೆಗಾಗಿ ಕೃಷ್ಣ ವೈನ್ಸ್ ರಮೇಶ್ ರವರ ಮನೆಗಾಗಿ ಚೈನ್‌ಗೇಟ್ ರಸ್ತೆಗೆ ಹೋಗಿ ಅಲ್ಲಿಂದ ಎಡಕ್ಕೆ ತಿರುಗಿ ಶ್ರೀ ಕೆ.ಜಿ. ಬೋಪಯ್ಯ ರವರ ಮನೆ ಎದುರು ರಸ್ತೆಗಾಗಿ ಕೆಳಗಿನ ಗೌಡಸಮಾಜ ಹತ್ತಿರಕ್ಕೆ ಬಂದು ಬಲಭಾಗಕ್ಕೆ ತುಳಸಿ ಭವನ ಕೆಳಬದಿ ಎದುರು ರಸ್ತೆಗಾಗಿ ಕನ್ನಂಡಬಾಣೆ ನೀರಿನ ಟ್ಯಾಂಕ್‌ಗಾಗಿ ಸೋಮವಾರಪೇಟೆ ರಸ್ತೆ ಸೇರುವುದು. ಎಡಬದಿ ಮಾತ್ರ ಸಿ.ಎಂ.ಸಿ. ಕ್ವಾಟ್ರಸ್ ಬದಿ ತೋಡಿಗೆ ಇಳಿದು ಬಸಪ್ಪ ಥಿಯೇಟರ್‌ಗಾಗಿ ಬಂದು ಟಿಕೇಟ್ ಹರಿಯುವ ಮುಂಭಾಗದಿಂದ ವೈವಾಸ್ ಹಿಂಬದಿಗಾಗಿ ಹಿಲ್‌ಟೌನ್ ಸೇರಿ ಎಡಭಾಗ ಮಾತ್ರ ಹೊರಟ ಸ್ಥಳ ಚಾಯ್ಸ್ ಹೊಟೇಲ್ ಸೇರುವುದು.<br><br>**ಉತ್ತರಕ್ಕೆ** : ವಾರ್ಡ್ ನಂ 4<br>**ದಕ್ಷಿಣಕ್ಕೆ** : ವಾರ್ಡ್ ನಂ 15<br>**ಪೂರ್ವಕ್ಕೆ** : ವಾರ್ಡ್ ನಂ 6<br>**ಪಶ್ಚಿಮಕ್ಕೆ** : ವಾರ್ಡ್ ನಂ 7 ಮತ್ತು 12 | ಹಿಂದುಳಿದ ವರ್ಗ (ಎ) |
| 6 | **ಮಡಿಕೇರಿ–6**<br><br>(ಬ್ಲಾಕ್ ನಂ 23 ಭಾಗಶಃ, ಕನ್ನಂಡ ಬಾಣೆ, ಚೈನ್ ಗೇಟ್ ಸಂಪಿಗೆ ಕಟ್ಟೆ, ರಸ್ತೆ) | ಕನ್ನಂಡಬಾಣೆ ಟ್ಯಾಂಕ್‌ನಿಂದ ಹೊರಟು ಬಲಬದಿಗಾಗಿ ಸೋಮವಾರಪೇಟೆ ರಸ್ತೆ ಸಂಪಿಗೆ ಕಟ್ಟೆಗಾಗಿ ಮೈಸೂರು ರಸ್ತೆ ಸೇರಿ ಮೈಸೂರು ರಸ್ತೆಯಲ್ಲಿ ಹೌಸಿಂಗ್ ಬೋರ್ಡ್‌ಗೆ ಬಂದು ಮ್ಯಾನ್ಸ್ ಕಾಂಪೌಂಡ್ ರಸ್ತೆಯಲ್ಲಿ ಕೆಳಗೆ ಬಂದು ಮಾನ್ಯ ಶ್ರೀ ಕೆ.ಜಿ. ಬೋಪಯ್ಯರವರ ಮನೆ ಸೇರಿಕೊಂಡು ಕೆಳಗಿನ ಗೌಡ ಸಮಾಜಕ್ಕಾಗಿ ಪುನಃ ಮೇಲಕ್ಕೆ ತುಳಸಿಭವನ ರಸ್ತೆಗಾಗಿ ನೀರಿನ ಟ್ಯಾಂಕ್ ಕನ್ನಂಡಬಾಣೆ ಸೇರುವುದು.<br><br>**ಉತ್ತರಕ್ಕೆ** : ವಾರ್ಡ್ ನಂ 4<br>**ದಕ್ಷಿಣಕ್ಕೆ** : ವಾರ್ಡ್ ನಂ 13<br>**ಪೂರ್ವಕ್ಕೆ** : ನಗರಸಭೆ ಸರಹದ್ದು, ಕೆ.ನಿಡುಗಣೆ ಗ್ರಾಮ ಪಂಚಾಯಿತಿ<br>**ಪಶ್ಚಿಮಕ್ಕೆ** : ವಾರ್ಡ್ ನಂ 5 | ಸಾಮಾನ್ಯ ಮಹಿಳೆ |
| 7 | **ಮಡಿಕೇರಿ–7**<br><br>(ಬ್ಲಾಕ್ ನಂ 2, ಗಣಪತಿಬೀದಿ, ಮಹದೇವ ಪೇಟೆ) | ಮಹದೇವಪೇಟೆಯಲ್ಲಿ ಬಾಷರವರ ಅಂಗಡಿಯ ಎದುರು ಭಾಗದಲ್ಲಿ ಮೆಹರುನ್ನೀಸಾರವರ ಮನೆಯಿಂದ ಪ್ರಾರಂಭಗೊಂಡು ಮುಖ್ಯ ರಸ್ತೆಗಾಗಿ ರಸ್ತೆ ಎಡಭಾಗದ ಮನೆಗಳನ್ನು ಸೇರಿಸಿಕೊಂಡು ಮಾರುಕಟ್ಟೆಯ ಎದುರು ಭಾಗದ ಮೆಟ್ಟಲುಗಳವರೆಗೆ ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಗಪತಿಬೀದಿಗಳವರೆಗೆ ತಲುಪಿ ಅಲ್ಲಿಂದ ಎಡಕ್ಕೆ ತಿರುಗಿ ಗಣಪತಿಬೀದಿ ಸೇರಿ ಅಲ್ಲಿಂದ ಪುನಃ ಎಡಕ್ಕೆ ತಿರುಗಿ ನಗರಸಭೆ ಬ್ಲಾಕ್ ನಂ. 2, ಮನೆಗಳನ್ನು ಸೇರಿಸಿಕೊಂಡು ಗಣಪತಿಬೀದಿ ಬ್ಲಾಕನ್ನು ಅಲ್ಲಿಂದಲೇ ಶ್ರೀ ಇಬ್ರಾಹಿಂರವರ ಮನೆ ಸೇರಿಸಿಕೊಂಡು ಪಕ್ಕದ ಓಣಿಯಿಂದ ತೋಡಿನ ಬದಿಗಾಗಿ ಸೋಮವಾರಪೇಟೆ ರಸ್ತೆ ಸೇರಿ ಅಲ್ಲಿಂದ ಎಡಭಾಗಕ್ಕಾಗಿ | ಸಾಮಾನ್ಯ |

| ಕ್ರ.ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| | | ಮಹದೇವಪೇಟೆಗೆ ಮುಂದುವರಿದು ಶ್ರೀಮತಿ ರಶ್ಮಿ ಪ್ರವೀಣ್ ಮನೆಗಾಗಿ ಪ್ರಾರಂಭದ ಸ್ಥಳ ಸೇರುವುದು.<br>**ಉತ್ತರಕ್ಕೆ** : ವಾರ್ಡ್ ನಂ 3<br>**ದಕ್ಷಿಣಕ್ಕೆ** : ವಾರ್ಡ್ ನಂ 12<br>**ಪೂರ್ವಕ್ಕೆ** : ವಾರ್ಡ್ ನಂ 5<br>**ಪಶ್ಚಿಮಕ್ಕೆ** : ವಾರ್ಡ್ ನಂ 8 | |
| 8 | **ಮಡಿಕೇರಿ–8**<br>(ಬ್ಲಾಕ್ ನಂ 1 8 ಭಾಗಶಃ, ಮಹದೇವಪೇಟೆ ಮುಖ್ಯ ರಸ್ತೆ, ಮಲ್ಲಿಕಾರ್ಜುನ ನಗರ, ಮುತ್ತಪ್ಪ ದೇವಸ್ಥಾನ ರಸ್ತೆ) | ನಗರಸಭೆ ಬ್ಲಾಕ್ ನಂ.01 ರ ಮುತ್ತಪ್ಪ ದೇವಸ್ಥಾನ ಎದುರು ಬಾಗದ ಮನೆ ನಂ. 1–1 ರ ಶ್ರೀ ಕಟ್ರತಂಡ ಚಿಣ್ಣಪ್ಪರವರ ಮನೆಗಾಗಿ ಪ್ರಾರಂಭಗೊಂಡು ಎ.ವಿ.ಶಾಲೆಗಾಗಿ ಬಂದು ಶ್ರೀ ಎಂ.ಸಿ, ಮಂಜುನಾಥ್‌ರವರ ಮನೆಗಾಗಿ ಮಹದೇವಪೇಟೆ ಮುಖ್ಯ ರಸ್ತೆಯ ಬಲಕ್ಕೆ ತಿರುಗಿ ಅಲ್ಲಿಂದ ಮಾರುಕಟ್ಟೆವರೆಗಿನ ಅಂದರೇ ಡಾ॥ ಕೆ.ಕೆ. ಅಪ್ಪಾಜಿಯವರ ಮನೆಗಾಗಿ ರಸ್ತೆಯ ಬಲಕ್ಕೆ ತಿರುಗಿ ಅಲ್ಲಿಂದ ಮುಂದುವರೆದು ಕೆಂಡದ ಗುಂಡಿಗಾಗಿ ಶ್ರೀ ಟಿ.ಎ.ಇಬ್ರಾಹಿಂರವರ ಮನೆಗಾಗಿ ಅಲ್ಲಿಂದ ಬಲಕ್ಕೆ ತಿರುಗಿ ಮುತ್ತಪ್ಪ ದೇವಸ್ಥಾನಕ್ಕಾಗಿ (ಮಲ್ಲಿಕಾರ್ಜುನನಗರ) ಮುತ್ತಪ್ಪ ದೇವಸ್ಥಾನ ರಸ್ತೆಯ ಬಲಭಾಗದ ಮನೆಯನ್ನು ಆವರಿಸಿಕೊಂಡು ಪ್ರಾರಂಭದ ಮನೆಯನ್ನು ಸೇರುವುದು.<br>**ಉತ್ತರಕ್ಕೆ** : ವಾರ್ಡ್ ನಂ 3<br>**ದಕ್ಷಿಣಕ್ಕೆ** : ವಾರ್ಡ್ ನಂ 10 ಮತ್ತು 11<br>**ಪೂರ್ವಕ್ಕೆ** : ವಾರ್ಡ್ ನಂ 7<br>**ಪಶ್ಚಿಮಕ್ಕೆ** : ವಾರ್ಡ್ ನಂ 9 | ಹಿಂದುಳಿದ ವರ್ಗ (ಎ) ಮಹಿಳೆ |
| 9 | **ಮಡಿಕೇರಿ–9**<br>(ಬ್ಲಾಕ್ ನಂ 8 ಭಾಗಶಃ, ಅಂಬೇಡ್ಕರ್ ಬಡಾವಣೆ, ರಾಣಿಪೇಟೆ) | ಮುತ್ತಪ್ಪ ದೇವಾಲಯದಿಂದ ಪ್ರಾರಂಭಗೊಂಡು ಕೋದಂಡ ರಾಮ ದೇವಾಲಯಕ್ಕಾಗಿ ಮುಂದುವರೆದು ಡಾ॥ ಅಂಬೇಡ್ಕರ್ ಬಡಾವಣೆ ಆವರಿಸಿಕೊಂಡು ಕಾಲೇಜು ರಸ್ತೆ ಮುಂದುವರಿದು ಎಂ. ಹರೀಶ್‌ರವರ ಅಂಗಡಿ ಬಳಿ ಇರುವ ಕಾಲುದಾರಿ ಮೂಲಕ ಬಲಬದಿಗಾಗಿ ಐಚಂಡ ಮನೆ ಸೇರಿ ಮುತ್ತಪ್ಪ ರೈ ಮನೆ ಸೇರಿಕೊಂಡು ಈದ್ಗಾ ಮೈದಾನ ಹಿಂಬದಿಗಾಗಿ ಕಾವೇರಿ ಲೇಔಟ್ ಇಳಿಯುವ ಕಾಲುದಾರಿಯಲ್ಲಿ ತೋಡಿನ ಸರಹದ್ದಿಗಾಗಿ ಪ್ರಾರಂಭದ ಸ್ಥಳಕ್ಕೆ ಸೇರುವುದು.<br>**ಉತ್ತರಕ್ಕೆ** : ವಾರ್ಡ್ ನಂ 3<br>**ದಕ್ಷಿಣಕ್ಕೆ** : ವಾರ್ಡ್ ನಂ 17<br>**ಪೂರ್ವಕ್ಕೆ** : ವಾರ್ಡ್ ನಂ 8 ಮತ್ತು 10<br>**ಪಶ್ಚಿಮಕ್ಕೆ** : ವಾರ್ಡ್ ನಂ 2 | ಪರಿಶಿಷ್ಟ ಜಾತಿ ಮಹಿಳೆ |

| ಕ್ರ ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| 10 | ಮಡಿಕೇರಿ–10 (ಬ್ಲಾಕ್ ನಂ 7, 4 ಭಾಗಶಃ, ಹಿಲ್ ರಸ್ತೆ, ಕನಕದಾಸ ರಸ್ತೆ, ರಾಣಿಪೇಟೆ ರಸ್ತೆ, ಪ್ರಕೃತಿ ಬಡಾವಣೆ) | ಕಾಲೇಜು ರಸ್ತೆಯಲ್ಲಿ ಡಿ.ಸಿ.ಸಿ. ಬ್ಯಾಂಕ್ ಬಳಿಯ ಮಾಂಸದ ಅಂಗಡಿ ಗೂಡಂಗಡಿಯಿಂದ ಕಾಲೇಜು ರಸ್ತೆಗಾಗಿ ಮುಂದಕ್ಕೆ ಸಾಗಿ ರಾಣಿಪೇಟೆಗೆ ತಿರುಗಿ ನಗರಸಭಾ ಪೌರಕಾರ್ಮಿಕರ ವಸತಿ ಗೃಹಕ್ಕಾಗಿ ಮುಂದುವರಿದು ಬಲಭಾಗದ ಮನೆಗಳನ್ನು ಆವರಿಸಿಕೊಂಡು ತಾಹಾ ಇಂಜಿನಿಯರಿಂಗ್ ವರ್ಕ್ಸ್ ಹಸಿಮೀನು ಮಾರುಕಟ್ಟೆಯಿಂದ ಹಿಲ್‌ರಸ್ತೆಗಾಗಿ ನಡೆದು ಕನಕದಾಸ ರಸ್ತೆಗಾಗಿ ಹಳೇ ಲಕ್ಷ್ಮಿ ಅಕ್ಕಿಗಿರಣಿಗಾಗಿ ಹಿಂದೂಸ್ಥಾನಿ ಶಾಲೆ ಸೇರಿ ಕನಕದಾಸ ರಸ್ತೆಯಲ್ಲಿ ಮುಂದುವರಿದು ಮಕ್ಕ ಮಸೀದಿ ಮುಂಭಾಗದ ಲಾಡ್ಜ್ ಸೇರಿ ಮುಂದೆ ಜಂಕ್ಷನ್ ಕಾಲೇಜು ರಸ್ತೆಗೆ ಪ್ರಾರಂಭದ ಸ್ಥಳಕ್ಕೆ ಸೇರುವುದು.<br>**ಉತ್ತರಕ್ಕೆ** : ವಾರ್ಡ್ ನಂ 8<br>**ದಕ್ಷಿಣಕ್ಕೆ** : ವಾರ್ಡ್ ನಂ 16<br>**ಪೂರ್ವಕ್ಕೆ** : ವಾರ್ಡ್ ನಂ 11<br>**ಪಶ್ಚಿಮಕ್ಕೆ** : ವಾರ್ಡ್ ನಂ 9 | ಸಾಮಾನ್ಯ ಮಹಿಳೆ |
| 11 | ಮಡಿಕೇರಿ–11 (ಬ್ಲಾಕ್ ನಂ 5, 4 ಭಾಗಶಃ, ಗಣಪತಿ ಬೀದಿ, ಮಹದೇವ ಪೇಟೆ) | ನಗರಸಭೆ ಹಸಿಮೀನು ಮಾರುಕಟ್ಟೆಯಿಂದ ಪ್ರಾರಂಭಗೊಂಡು ಬಲಬದಿ ತಿರುಗಿ ಮಹದೇವಪೇಟೆ ತಲುಪಿ ಎಡಭಾಗ ತಿರುಗಿ ಮಾರುಕಟ್ಟೆಯ ಎದುರು ಭಾಗದ ರಸ್ತೆಗಾಗಿ ಇಳಿದು ಗಣಪತಿಬೀದಿ ತಲುಪಿ ಇಂದಿರಾಗಾಂಧಿ ವೃತ್ತ ಚೌಕಿ ಕಡೆಗೆ ನಡೆದು ಬಲಭಾಗದ ಮನೆಗಳನ್ನು ಆವರಿಸಿಕೊಂಡು ಚೌಕಿಯಿಂದ ಡಿ.ಸಿ.ಸಿ. ಬ್ಯಾಂಕುವರೆಗೆ ಕಾಲೇಜು ರಸ್ತೆಯಲ್ಲಿ ಮುಂದುವರಿದು (ಬಲಭಾಗ ಮಾತ್ರ) ಅಲ್ಲಿಂದ ಕನಕದಾಸ ರಸ್ತೆ ಮೂಲಕ ಲಕ್ಷ್ಮಿ ಅಕ್ಕಿಗಿರಣಿ ಒಳಗೊಂಡು ಹಿಲ್‌ರಸ್ತೆ ಸೇರಿ ಹೊರಟು ಮಾರುಕಟ್ಟೆ ಹತ್ತಿರ ಹಸಿಮೀನು ಮಾರುಕಟ್ಟೆ ಸ್ಥಳಕ್ಕೆ ಸೇರುವುದು.<br>**ಉತ್ತರಕ್ಕೆ** : ವಾರ್ಡ್ ನಂ 8<br>**ದಕ್ಷಿಣಕ್ಕೆ** : ವಾರ್ಡ್ ನಂ 16<br>**ಪೂರ್ವಕ್ಕೆ** : ವಾರ್ಡ್ ನಂ 7 ಮತ್ತು 12<br>**ಪಶ್ಚಿಮಕ್ಕೆ** : ವಾರ್ಡ್ ನಂ 10 | ಸಾಮಾನ್ಯ |
| 12 | ಮಡಿಕೇರಿ–12 (ಬ್ಲಾಕ್ ನಂ 6, ಗಣಪತಿಬೀದಿ, | ಗಣಪತಿಬೀದಿಯ ಬ್ಲಾಕ್ ನಂ. 3 ಮನೆ ನಂ. 28.1 ರಿಂದ ಪ್ರಾರಂಭಗೊಂಡು ಗಣಪತಿಬೀದಿ ಚೌಕಿಗಾಗಿ ರಸ್ತೆಯ ಎಡಭಾಗದ ಮನೆಗಳನ್ನು ಸೇರಿಸಿಕೊಂಡು ಹೊಟೇಲ್ ನ್ಯೂಚಿತ್ರದ ತೋಡಿನವರೆಗೆ ಬಂದು ಅಲ್ಲಿಂದ ತಿರುಗಿ ದಾಸವಾಳ ರಸ್ತೆಗಾಗಿ ವೈವಾಸ್ ನರ್ಸಿಂಗ್ ಹೋಂಗಾಗಿ ಮುಂದೆ ಸಾಗಿ ಬಸಪ್ಪ ಥಿಯೇಟರ್ ಬಳಿ ರಸ್ತೆಗಾಗಿ ತೋಡಿಗೆ ಸೇರಿ ತೋಡಿನ ಸರಹದ್ದುಗಾಗಿ | ಸಾಮಾನ್ಯ ಮಹಿಳೆ |

| ಕ್ರ. ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| | ದಾಸವಾಳ) | ಮುಂದುವರಿದು ಎಡಭಾಗ ತಿರುಗಿ ಬ್ಲಾಕ್ ನಂ. (3) ರ ಸರಹದ್ದು ಮೂಲಕ ಗಣಪತಿಬೀದಿ ಬಿ.ಕೆ. ರಂಗಪ್ಪ, ಮನೆ ಬಳಿ ಪ್ರಾರಂಭದ ಸ್ಥಳಕ್ಕೆ ಸೇರುವುದು.<br>**ಉತ್ತರಕ್ಕೆ** : ವಾರ್ಡ್ ನಂ 7<br>**ದಕ್ಷಿಣಕ್ಕೆ** : ವಾರ್ಡ್ ನಂ 16<br>**ಪೂರ್ವಕ್ಕೆ** : ವಾರ್ಡ್ ನಂ 5<br>**ಪಶ್ಚಿಮಕ್ಕೆ** : ವಾರ್ಡ್ ನಂ 11 | |
| 13 | **ಮಡಿಕೇರಿ–13**<br>(ಬ್ಲಾಕ್ ನಂ 18 ,ಪುಟಾಣಿ ನಗರ) | ಮೈಸೂರು ರಸ್ತೆ ಟಿ.ಎಂ.ಸಿ. ಕ್ವಾಟ್ರಸ್ ಬಲಬದಿಗಾಗಿ ಬಂದು ಪಿ.ಡಬ್ಲ್ಯೂ.ಡಿ. ಕ್ವಾಟ್ರಸ್ ಬಲಬದಿ ಮನೆಗಳು ಮಾತ್ರ ಸೇರಿ ಶ್ರೀ ಕೃಷ್ಣಪ್ಪವರ ಮನೆ ಬಳಿಯ ದಾರಿಗಾಗಿ ಕೃಷ್ಣಪ್ಪ ರವರ ಮನೆಗಳ ಪ್ರದೇಶ ಸೇರಿ ಅಲ್ಲಿಂದ ಮುಂದಕ್ಕೆ ಕೆಳಗಿಳಿದು ಜಯನಗರದ ನೀರುಸರಬರಾಜು ಬಾವಿ ಸೇರಿ ಕೊಂಡು ಬಡೆಸಾಬ್ ಮನೆಯ ಆವರಣ ಸೇರಿಸಿಕೊಂಡು ಮುಂದಕ್ಕೆ ಬಂದು ಚಾಮರಾಜ ಬಂಗ್ಲೆ ಎದುರು ಮುಖ್ಯ ರಸ್ತೆಗೆ ಸೇರಿ ವಿಲಿಯಮ್ಸ್ ಮನೆ ಸೇರಿಸಿಕೊಂಡು ಕೃಷ್ಣ ವೈನ್ ರಮೇಶ್ ಮನೆ ಮುಂಭಾಗ ಬಲಬದಿ ಪ್ರದೇಶ ಸೇರಿ ಟಿ.ಎಂ.ಸಿ. ಕ್ವಾಟ್ರಸ್ ಸೇರುವುದು.<br>**ಉತ್ತರಕ್ಕೆ** : ವಾರ್ಡ್ ನಂ 6<br>**ದಕ್ಷಿಣಕ್ಕೆ** : ವಾರ್ಡ್ ನಂ 14<br>**ಪೂರ್ವಕ್ಕೆ** : ವಾರ್ಡ್ ನಂ 23<br>**ಪಶ್ಚಿಮಕ್ಕೆ** : ವಾರ್ಡ್ ನಂ 15 | ಸಾಮಾನ್ಯ ಮಹಿಳೆ |
| 14 | **ಮಡಿಕೇರಿ–14**<br>**(ಬ್ಲಾಕ್ ನಂ 17 ಮತ್ತು 18 ಭಾಗಶಃ, ಗುಂಡುರಾವ್ ಬಡಾವಣೆ, ಜಯನಗರ,** | ಜಿ.ಟಿ. ಸರ್ಕಲ್‌ನಿಂದ ಗಣಪತಿ ನರ್ಸಿಂಗ್ ಹೋಂನಿಂದ ಇಳಿದು ಆಂಜನೇಯ ದೇವಸ್ಥಾನ ರಸ್ತೆ ಬಲಭಾಗ ತಿರುಗಿ ಮುಂದುವರಿದು ರೆಡ್‌ಫರ್ನ್ ಆವರಿಸಿಕೊಂಡು ಬ್ರಾಹ್ಮಣರ ಕಲ್ಯಾಣ ಮಂಟಪ ಆವರಿಸಿಕೊಂಡು ದಾಮೋದರ ಮೇಸ್ತ್ರಿ ಮನೆ ಸೇರಿ ಅಬ್ಕಾರಿ ಇಲಾಖೆ ಕಛೇರಿಯಿಂದ ಬಲಕ್ಕೆ ತಿರುಗಿ ಕಾಲುದಾರಿಯಲ್ಲಿ ಗದ್ದೆಗೆ ಇಳಿದು ಶ್ರೀ ಬಿದ್ದಪ್ಪ ಲಾಯರ್ ಮನೆ ಬಳಿ ಐ.ಬಿ. ರಸ್ತೆಗೆ ಸೇರಿ ಮುಂದೆ ಸುದರ್ಶನ ಗೆಸ್ಟ್ ಹೌಸ್ ರಸ್ತೆಗಾಗಿ ಮುಂದೆ ಬಲಕ್ಕೆ ತಿರುಗಿ ಉಣ್ಣಿಕೃಷ್ಣರವರ ಮನೆ ಮುಂದೆ ರಸ್ತೆಗಾಗಿ ಶ್ರೀಮತಿ ಸುಮಾವಸಂತ್‌ರವರ ಮನೆ ಎದುರುಗಡೆಗಾಗಿ ಶಾಂತಿನಿಕೇತನ ರಸ್ತೆಗಾಗಿ ಮೂಡ ಕಛೇರಿಗಾಗಿ ಮುಖ್ಯ ರಸ್ತೆಗೆ ಬಂದು ಕೆ.ಎಸ್.ಆರ್.ಟಿ.ಸಿ. ಡಿಪೋಕ್ಕಾಗಿ | ಹಿಂದುಳಿದ ವರ್ಗ (ಎ) ಮಹಿಳೆ |

| ಕ್ರ. ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| | ಜಿ.ಟಿ.ರಸ್ತೆ) | ಮುಖ್ಯ ರಸ್ತೆಯಲ್ಲಿಯೇ ಎಡಕ್ಕೆ ತಿರುಗಿ ಲಯನ್ಸ್ ಕ್ಲಬ್ ಸಭಾಂಗಣ ರಸ್ತೆ ಮೂಲಕ ತಿರುಗಿ ಜಿ.ಟಿ. ಸರ್ಕಲ್ ಮೂಲಕ ಗಣಪತಿ ನರ್ಸಿಂಗ್ ಹೋಂ ಸೇರುವುದು.<br><br>**ಉತ್ತರಕ್ಕೆ** : ವಾರ್ಡ್ ನಂ 13<br>**ದಕ್ಷಿಣಕ್ಕೆ** : ವಾರ್ಡ್ ನಂ 22<br>**ಪೂರ್ವಕ್ಕೆ** : ವಾರ್ಡ್ ನಂ 23<br>**ಪಶ್ಚಿಮಕ್ಕೆ** : ವಾರ್ಡ್ ನಂ 15 | |
| 15 | **ಮಡಿಕೇರಿ–15**<br><br>**(ಬ್ಲಾಕ್ ನಂ 13 ಮತ್ತು 20 ಭಾಗಶಃ, ರೇಸ್ ಕೋರ್ಸ್ ರಸ್ತೆ, ಗೌಳಿ ಬೀದಿ ಭಾಗಶಃ, ದೇಚೂರು, ಬ್ರಾಹ್ಮನರ ಬೀದಿ)** | ಮಂಗೇರಿರ ಮುತ್ತಣ್ಣ ಸರ್ಕಲ್‌ನಿಂದ ರಾಜಾಸೀಟ್ ರಸ್ತೆ ಕುವೆಂಪು ಪಾರ್ಕ್ ಪ್ರದೇಶ (ಬಲಬದಿ ಮಾತ್ರ) ಆವರಿಸಿಕೊಂಡು ರಾಜಾಸೀಟ್ ರಸ್ತೆಯಲ್ಲಿ ಮುಂದುವರಿದು ರಾಜದರ್ಶನ್ ಸೇರಿ ಲಿವಾ ಕ್ಲೀನಿಕ್ ಸೇರಿಕೊಂಡು ರೇಸ್‌ಕೋಸ್ ರಸ್ತೆಯಲ್ಲಿ ಮುಂದುವರಿದು ಲೀ ಕೂರ್ಗ್ ಕಟ್ಟಡದ ಪಕ್ಕದ ರಸ್ತೆ ಇಳಿದು ಶ್ರೀಮತಿ ಲೀಲಾವತಿ ದೇವಶೆಟ್ಟಿ ರವರ ಮನೆ ಸೇರಿಕೊಂಡು ಗೌಳಿಬೀದಿ ಮುಖ್ಯ ರಸ್ತೆಗೆ ಸೇರುವುದು. ಅಲ್ಲಿಂದ ಬಲಕ್ಕೆ ತಿರುಗಿ ಗೌಳಿಬೀದಿ ರಸ್ತೆಯಲ್ಲಿ ಮುಂದುವರಿದು ಶ್ರೀ ಗಣೇಶ್ ಶೆಣೈ ಯವರ ಮನೆ ಶ್ರೀ ಕಂಚಿಕಾಮಾಕ್ಷಿ ದೇವಾಲಯ ಪ್ರದೇಶ ಸೇರಿಕೊಂಡು ಮುಖ್ಯ ರಸ್ತೆಯಲ್ಲಿ ಎಡಕ್ಕೆ ತಿರುಗಿ ಲಿಂಗಪ್ಪ ಕಾಂಪೌಂಡ್ ಸೇರಿಕೊಂಡು ಟೌನ್‌ಹಾಲ್ ನಗರಸಭೆ ಕಟ್ಟಡ ಹಿಂಭಾಗದ ರಸ್ತೆಗಾಗಿ ಬಲಕ್ಕೆ ತಿರುಗಿ ಮುಖ್ಯ ರಸ್ತೆಗೆ ಬಂದು ಕೊಡವ ಸಮಾಜ ಕಟ್ಟಡ ಪೋಲೀಸ್ ಠಾಣೆ ಎಲಕ್ಕಿ ಸೊಸೈಟಿ ಕಟ್ಟಡ ಸೇರಿ ಪೋಸ್ಟ್ ಆಫೀಸ್ ಎದುರು ನಡೆದು ರಸ್ತೆಯಲ್ಲಿ ಬಲಕ್ಕೆ ತಿರುಗಿ ಹಳೇ ಬ್ರಹಗಿರಿ ಪ್ರೆಸ್ ಇದ್ದ ರಸ್ತೆ ಇಳಿದು ಓಂಕಾರೇಶ್ವರ ರಸ್ತೆಗೆ ತಲುಪಿ ಮೋಹನ್ ಸರ್ವಿಸ್ ಸ್ಟೇಷನ್ ಪಕ್ಕದ ಮೆಟ್ಟಲು ರಸ್ತೆಯಲ್ಲಿ ಮೇಲಕ್ಕೆ ಹತ್ತಿ ಬಾಣೆಮೊಟ್ಟೆ ರಸ್ತೆ ಸೇರಿ ನೀರಿನ ಟ್ಯಾಂಕ್‌ನಿಂದ ಬಲಕ್ಕೆ ತಿರುಗಿ ಶ್ರೀ ಸಿಂಗ್ ಮಾಸ್ಟರ್ ಮನೆ ಸೇರಿ ರಾಜ ಮೊದಲಿಯರ್ ಕಾಂಪೌಡ್ ಸೇರಿ ಗಣಪತಿ ದೇವಸ್ಥಾನ ಎದುರಿಗೆ ಬಂದು ಬಲಕ್ಕೆ ತಿರುಗಿ ಜ್ಯೋತಿ ಮಿಲ್ ಬಳಿ ಬಂದು ಮುಖ್ಯರಸ್ತೆಗೆ ಸೇರಿ ಬಲಕ್ಕೆ ತಿರುಗಿ ನಂತರ ಎಡಕ್ಕೆ ತಿರುಗಿ ಆಂಜನೇಯ ದೇವಸ್ಥಾನ ಸೇರಿ ಮುಖ್ಯರಸ್ತೆಯಾಗಿ ವಿಕಾಸ್ ಟ್ರೇಡರ್ಸ್ ಸೇರಿ ಮುಂದುವರಿದು ಎಡಕ್ಕೆ ತಿರುಗಿ (ಮರ್ಕರ ನರ್ಸಿಂಗ್ ಹೋಮ್) ಸೇರಿ ಜಿ.ಟಿ. ಸರ್ಕಲ್ ಮುಖ್ಯ ರಸ್ತೆಗೆ ಬಂದು ಬಲಕ್ಕೆ ತಿರುಗಿ ಮಂಗೇರಿ ಮುತ್ತಣ್ಣ ಸರ್ಕಲ್‌ಗೆ ಬಂದು ಸೇರುವುದು.<br><br>**ಉತ್ತರಕ್ಕೆ** : ವಾರ್ಡ್ ನಂ 5<br>**ದಕ್ಷಿಣಕ್ಕೆ** : ವಾರ್ಡ್ ನಂ 22<br>**ಪೂರ್ವಕ್ಕೆ** : ವಾರ್ಡ್ ನಂ 14<br>**ಪಶ್ಚಿಮಕ್ಕೆ** : ವಾರ್ಡ್ ನಂ 16 | ಪರಿಶಿಷ್ಟ ಪಂಗಡ |

| ಕ್ರ ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| 16 | **ಮಡಿಕೇರಿ–16**<br><br>**(ಬ್ಲಾಕ್ ನಂ 11, ಗೌಳಿಬೀದಿ ರಸ್ತೆ, ಕೊಹಿನೂರು ರಸ್ತೆ, ಸಿ.ಪಿ.ಸಿ.ಲೇ ಔಟ್, ಸರ್ಕಾರಿ ಮತ್ತು ಖಾಸಗಿ ಬಸ್ಸ್ ನಿಲ್ದಾಣ)** | ಚೌಕಿಯಿಂದ ಬಲಭಾಗಕ್ಕಾಗಿ ಖಾಸಗಿ ಬಸ್ ನಿಲ್ದಾಣ ಹಾಲಿನ ಡೈರಿನಿಂದ ಮೆಟ್ಟಲು ಕಾಲುದಾರಿ (ಖಾದಿ ಭಂಡಾರ) ಬಲಭಾಗ ಮುಂದುವರಿದು ನಗರಸಭಾ ವಸತಿಗೃಹ ಮುಂಭಾಗ ಕಾಲುದಾರಿ ಮೂಲಕ ಅಣ್ಣಪ್ಪ, ಸಾರಾಯಿ ಅಂಗಡಿವರೆಗೆ ಮುಂದುವರಿದು ಅಲ್ಲಿಂದ ಕೂರ್ಗ್ ಸರ್ವಿಸ್ ಸ್ಟೇಷನ್ ಕಾಲುದಾರಿಯಲ್ಲಿ ಮುಂದುವರಿದು ಬಲಬದಿ ಮಾತ್ರ ರೇಸ್‌ಕೋರ್ಸ್ ರಸ್ತೆಯಲ್ಲಿ ಮುಂದುವರಿದು ವೆಬ್ಸ್ ಜಂಕ್ಷನ್ ರಸ್ತೆ (ಕಾಂಕ್ರೀಟ್ ರಸ್ತೆ) ಮುಂದುವರಿದು ಸಿ.ಪಿ.ಸಿ. ಜಂಕ್ಷನ್‌ನಿಂದ ಮುಂದುವರಿದು ಚೌಕಿ ಪ್ರಾರಂಭದ ಸ್ಥಳಕ್ಕೆ ಸೇರುವುದು. ಶ್ರೀ ಸತೀಶ್ ಪೈ ಮನೆ ಜಂಕ್ಷನ್ ಕಾಲುದಾರಿಯಲ್ಲಿ ಮೇಲಕ್ಕೆ ಹತ್ತಿ ಬಲಭಾಗದ ಪ್ರದೇಶ ಸೇರಿಕೊಂಡು ನಗರಸಭೆ ವಸತಿಗೃಹಕ್ಕಾಗಿ ಖಾದಿ ಬಂಡಾರ ಸೇರಿ ಬಸ್ ಸ್ಟ್ಯಾಂಡ್ ರಸ್ತೆಗೆ ಬಂದು ಪೋಸ್ಟ್ ಆಫೀಸ್ ಬಂದು ಸಿ.ಎಂ.ಸಿ. ಕಟ್ಟಡ ಸೇರಿ ಗೌಳಿಬೀದಿ ರಸ್ತೆ ಟಿ.ಎಂ. ಆಲೀಯವರ ಮನೆ ಸೇರಿಸಿಕೊಂಡು ಗೌಳಿಬೀದಿ ರಸ್ತೆಯಲ್ಲಿ ಮುಂದುವರಿದು ಬಲಭಾಗ ಮಾತ್ರ ಆವರಿಸಿಕೊಂಡು ಇಂಡಿಯನ್ ಗ್ಯಾಸ್ ಮಾಲೀಕರ ಮನೆ ಸೇರಿಸಿಕೊಂಡು ಮುಂದೆ ಹೋಗಿ ಶ್ರೀಮತಿ ಮೋಂತಿ ಗಣೇಶ್ ಮನೆ ಸೇರಿಸಿಕೊಂಡು ಶ್ರೀ ಸತೀಶ್ ಪೈ ಮನೆ ಬಳಿ ಪ್ರಾರಂಭದ ಸ್ಥಳಕ್ಕೆ ಸೇರುವುದು.<br><br>ಉತ್ತರಕ್ಕೆ : ವಾರ್ಡ್ ನಂ 10, 11, 12<br>ದಕ್ಷಿಣಕ್ಕೆ : ವಾರ್ಡ್ ನಂ 20<br>ಪೂರ್ವಕ್ಕೆ : ವಾರ್ಡ್ ನಂ 15<br>ಪಶ್ಚಿಮಕ್ಕೆ : ವಾರ್ಡ್ ನಂ 18, 17 | ಸಾಮಾನ್ಯ |
| 17 | **ಮಡಿಕೇರಿ–17**<br><br>**(ಬ್ಲಾಕ್ ನಂ 9 ಕಾಲೇಜು ರಸ್ತೆ, ಕೂರ್ಗ್ ಇಂಟರ್ ನ್ಯಾಷನಲ್ ಹೋಟೇಲ್, ಹತ್ತಿರ, ಕಾನ್ವೆಂಟ್ ರಸ್ತೆ)** | ಕಾನ್ವೆಂಟ್ ಜಂಕ್ಷನ್‌ನಿಂದ ಬಲಬದಿ ಪ್ರದೇಶ ಸೇರಿ ಹೊರಟು ಸಿ.ಪಿ.ಸಿ. ಜಂಕ್ಷನ್‌ನಿಂದ ಬಲಬದಿ ತಿರುಗಿ ಪೋಟರಿ ರಸ್ತೆ ಮೂಲಕ ಬಲಬದಿಯ ಮನೆಗಳು ಸೇರಿ ರೇಸ್‌ಕೋರ್ಸ್ ರಸ್ತೆಗೆ ತಲುಪಿ ತಿರುಗಿ ಸಾಯಿ ಕ್ರೀಡಾಂಗಣ ಎಲ್ಲಾ ಸೇರಿ ಬಲಬದಿಯ ಎಲ್ಲಾ ಪ್ರದೇಶ ಸೇರಿ ಕೆನರಾ ಬ್ಯಾಂಕ್ ಜಂಕ್ಷನ್‌ನಿಂದ ಮೋಹನ್ ಮೊಣ್ಣಪ್ಪ ಮನೆ ಇರುವ ಹೌಸಿಂಗ್ ಬೋರ್ಡ್‌ನ ಬಲಬದಿಗಳ ಮನೆಗಳು ಮಾತ್ರ ಸೇರಿ ವಾರ್ಡ್ ನಂ. 3 ರ ಸರಹದ್ದಿನ ಮೂಲಕ ಮುಂದುವರಿದು ಮುಂದೆ ಬಾವಿ ಬಳಿ ಸೇರಿ ಅಲ್ಲಿಂದ ಎಡಬಲ ಮನೆಗಳು ಸೇರಿಸಿಕೊಂಡು ಕಾನ್ವೆಂಟ್ ಗ್ರೌಂಡ್ ಸೇರಿಸಿಕೊಂಡು ಅದೇ ರಸ್ತೆಯಲ್ಲಿ ಮುಂದುವರಿದು ಶಕ್ತಿ ಪ್ರೆಸ್ ಮನೆ ಕಾನ್ವೆಂಟ್ ಜಂಕ್ಷನ್ ಹೊರಟ ಸ್ಥಳವನ್ನು ಸೇರುವುದು.<br><br>ಉತ್ತರಕ್ಕೆ : ವಾರ್ಡ್ ನಂ 2<br>ದಕ್ಷಿಣಕ್ಕೆ : ವಾರ್ಡ್ ನಂ 18<br>ಪೂರ್ವಕ್ಕೆ : ವಾರ್ಡ್ ನಂ 10<br>ಪಶ್ಚಿಮಕ್ಕೆ : ವಾರ್ಡ್ ನಂ 1 | ಸಾಮಾನ್ಯ |

| ಕ್ರ ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| 18 | ಮಡಿಕೇರಿ–18<br><br>(ಬ್ಲಾಕ್ ನಂ 14 ಭಾಗಶಃ ಹೊಸಬಡಾವಣೆ, ರೇಸ್ ಕೋರ್ಸ್ ರಸ್ತೆ) | ರಾಡ್ರಿಗಸ್ ಬಿಲ್ಡಿಂಗ್ ಜಂಕ್ಷನ್, ವಿನ್ಸೆಂಟ್ ಕಾಂಪೌಂಡ್ ಕಟ್ಟಡ ಸೇರಿ ಬಲಭಾಗ ಪ್ರದೇಶ ಆವರಿಸಿಕೊಂಡು ಕ್ರಿಶ್ಚಿಯನ್ ಸ್ಮಶಾನ ರಸ್ತೆ ಜಂಕ್ಷನ್ ಬಲಭಾಗ ಪ್ರದೇಶದ ಎಲ್ಲಾ ಮನೆಗಳು ಸೇರಿಕೊಂಡು ಮುಂದುವರಿದು ಅಲ್ಲಿಂದ ತಿರುಗಿ ರೇಸ್‌ಕೋರ್ಸ್ ರಸ್ತೆಯಿಂದ ಹಳೆ ಪೋಲೀಸ್ ವಸತಿಗೃಹಕ್ಕೆ ಹೋಗಿ ವಸತಿ ಗೃಹದ ಮಧ್ಯ ಭಾಗದ ಕಾಲುದಾರಿಯಿಂದ ಬಲಭಾಗದ ಪೋಲೀಸ್ ವಸತಿಗೃಹ ಸೇರಿ ಮುಖ್ಯ ರಸ್ತೆಗೆ ಬಂದು ಬಲಕ್ಕೆ ತಿರುಗಿ ಡಾ॥ ಪಾಲೇಕರ್ ಮನೆಯಿಂದ ಮುಂದುವರಿದು ಪ್ರಾರಂಭದ ರಾಡ್ರಿಗಸ್ ಜಂಕ್ಷನ್‌ಗೆ ಸೇರುವುದು.<br><br>**ಉತ್ತರಕ್ಕೆ** : ವಾರ್ಡ್ ನಂ 17<br>**ದಕ್ಷಿಣಕ್ಕೆ** : ವಾರ್ಡ್ ನಂ 20<br>**ಪೂರ್ವಕ್ಕೆ** : ವಾರ್ಡ್ ನಂ 16<br>**ಪಶ್ಚಿಮಕ್ಕೆ** : ವಾರ್ಡ್ ನಂ 19 | ಹಿಂದುಳಿದ ವರ್ಗ (ಎ) |
| 19 | ಮಡಿಕೇರಿ–19<br><br>(ಬ್ಲಾಕ್ ನಂ 14 ಭಾಗಶಃ,ಡೈರಿ ಫಾರಂ, ಸುಬ್ರಮಣ್ಯ ನಗರ, ಡಿ ಆರ್ ಕ್ವಾಟ್ರಸ್) | ಕೃಷಿ ವಿದ್ಯಾಲಯದಿಂದ ಡೈರಿ ಫಾರಂ ಬಳಿಯ ಬಲಬದಿಯ ಎಲ್ಲಾ ಮನೆಗಳು ಸೇರಿ ಮುಂದುವರಿದು ಫಯರ್ ಸರ್ವಿಸ್ ಸ್ಟೇಷನ್ ಮುಂಭಾಗಕ್ಕಾಗಿ ಜ್ಯೋತಿ ನಗರದ ಮೆಟ್ಟಲು ಹತ್ತಿರ ಎಲ್ಲಾ ಬಲಭಾಗದ ಮನೆಗಳು ಸೇರಿಕೊಂಡು ನೀರು ಶುದ್ಧೀಕರಣ ಕೇಂದ್ರದಿಂದ ಬಲಭಾಗಕ್ಕಾಗಿ ಎಸ್.ಡಬ್ಲ್ಯೂ.ಎಂ. ರಸ್ತೆಗಾಗಿ ನಗರಸಭೆ ಸರಹದ್ದುನಿಂದಾಗಿ ಡಿ.ಎ.ಆರ್. ವಸತಿಗೃಹ ವಠಾರ ಸುಬ್ರಮಣ್ಯ ನಗರ ವಠಾರ ಸೇರಿಸಿಕೊಂಡು, ಸುಬ್ರಮಣ್ಯ ನಗರದಿಂದ ತೋಡಿಗೆ ಇಳಿದು ತೋಡು ಬದಿಯಿಂದ ಮುಂದುವರಿದು ಗ್ರಾಮಾಂತರ ಪೋಲೀಸ್ ಠಾಣೆ ಆವರಿಸಿ ಕಾಲೇಜು ರಸ್ತೆಗೆ ಸೇರಿ ಬಲಕ್ಕೆ ತಿರುಗಿ ವಸತಿಗೃಹಗಳು ಸೇರಿಸಿಕೊಂಡು ಮೈತ್ರಿ ಹಾಲ್ ಸೇರಿಸಿಕೊಂಡಂತೆ, ಮುಂದುವರಿದು ಬೇಬಿ ಪೂವಯ್ಯ ಅಂಗಡಿ ಸೇರಿ ಅದೇ ರಸ್ತೆಯಲ್ಲಿ ಪ್ರಾರಂಭದ ಸ್ಥಳಕ್ಕೆ ಸೇರುವುದು. (ಸದ್ರಿ ವಾರ್ಡಿನ ಎಲ್ಲಾ ಬಲಬದಿ ಮಾತ್ರ)<br><br>**ಉತ್ತರಕ್ಕೆ** : ವಾರ್ಡ್ ನಂ 1<br>**ದಕ್ಷಿಣಕ್ಕೆ** : ನಗರಸಭಾ ಸರಹದ್ದು, ಮದೆ ಗ್ರಾಮ ಪಂಚಾಯಿತಿ<br>**ಪೂರ್ವಕ್ಕೆ** : ವಾರ್ಡ್ ನಂ 18 ಮತ್ತು 20<br>**ಪಶ್ಚಿಮಕ್ಕೆ** : ನಗರಸಭಾ ಸರಹದ್ದು, ಮದೆ ಗ್ರಾಮ ಪಂಚಾಯಿತಿ | ಸಾಮಾನ್ಯ |
| 20 | ಮಡಿಕೇರಿ–20<br>(ಬ್ಲಾಕ್ ನಂ 14 ಭಾಗಶಃ, ಸ್ಟೀವರ್ಟ್ ಹಿಲ್, ಜ್ಯೋತಿ ನಗರ, | ಕ್ರಿಶ್ಚಿಯನ್ ಸ್ಮಶಾನದಿಂದ ಬಲಭಾಗಕ್ಕಾಗಿ ಹಾಲಿನ ಬೂತ್ ಜಂಕ್ಷನ್‌ನಿಂದ ಬಲಕ್ಕೆ ತಿರುಗಿ ಮುಂದೆ ಸಾಗಿ ಚಾಮುಂಡೇಶ್ವರಿ ನಗರ ರಸ್ತೆಗೆ ಇಳಿದು ನಗರಸಭೆ ನೀರಿನ ಟ್ಯಾಂಕ್ ಮೂಲಕ ಬಲಭಾಗ ಮನೆಗಳನ್ನು ಆವರಿಸಿಕೊಂಡು ಕೆಳಗಿನವರೆಗೆ ಹೋಗಿ ಬಲಬದಿ ಮನೆಗಳು ಮಾತ್ರ ತೆಗೆದುಕೊಂಡು ಮಡಿಕೇರಿ ಸರಹದ್ದು ಮೂಲಕ ಮೇಲಕ್ಕೆ ಹತ್ತಿ ಆಕಾಶವಾಣಿ ವಸತಿ ಗೃಹ ಸೇರಿಸಿಕೊಂಡು ಮುಂದೆ ಹೋಗಿ ತಾಡಿಜಾನ್ ಮನೆ ಸೇರಿಸಿಕೊಂಡು ಬಲಕ್ಕೆ ಜ್ಯೋತಿ ನಗರಕ್ಕೆ ತಿರುಗಿ ಎಲ್ಲಾ ಮನೆ ಸೇರಿ ಹಳೆ | ಹಿಂದುಳಿದ ವರ್ಗ (ಎ) |

| ಕ್ರ ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| | **ವೆಂಕಟರಾಮಣ ಲೇ ಔಟ್, ಚಾಮುಂಡೇಶ್ವರಿ ನಗರ ಭಾಗಶಃ)** | ಡೈರಿಫಾರಂ ಸ್ಮಶಾನ ಸೇರಿ ವೆಂಕಟರಮಣ ಲೇಔಟ್ ಆಗಿ ಪೋಲೀಸ್ ವಸತಿಗೃಹದ ಮಧ್ಯಭಾಗದ ಕಾಲುದಾರಿಯ ಬಲಬದಿ ಆವರಿಸಿಕೊಂಡು ಪ್ರಾರಂಭದ ಸ್ಥಳ ಸೇರುವುದು. (ಬಲಬದಿ ಮಾತ್ರ) ರಾಜಸೀಟ್ ಬಳಿಯ ಕುಂದೂರುಮೊಟ್ಟೆ ದೇವಸ್ಥಾನದಿಂದ ಬಲಭಾಗಕ್ಕಾಗಿ ರಸ್ತೆಯಲ್ಲಿ ಮುಂದುವರಿದು ಚಾಮುಂಡೇಶ್ವರಿ ನಗರದ ಬಲಭಾಗದ ಪ್ರದೇಶ ಸೇರಿ ಚಾಮುಂಡೇಶ್ವರಿ ನಗರದಲ್ಲಿ ಕೊನೆಗೆ ಮುಖ್ಯ ರಸ್ತೆಗೆ ಜಂಕ್ಷನ್‌ಗೆ ಬಂದು ಬಲಭಾಗದ ಪ್ರದೇಶ ಸೇರಿಕೊಂಡು ನಗರಸಭೆ ಹಾಲು ಡೈರಿ ಜಂಕ್ಷನ್‌ಗೆ ತಲುಪಿ ಕೆಳಗಡೆ ಕ್ರಿಶ್ಚಿಯನ್ ಸ್ಮಶಾನಕ್ಕೆ ಹೋಗುವ ರಸ್ತೆಯಲ್ಲಿ ಮುಂದುವರಿದು ಬಲಭಾಗದ ಪ್ರದೇಶ ಸೇರಿಸಿಕೊಂಡು ಕ್ರಿಶ್ಚಿಯನ್ ಸ್ಮಶಾನದ ಜಂಕ್ಷನ್‌ನಿಂದ ತಿರುಗಿ ರಾಡ್ರಿಗಸ್ ಬಿಲ್ಡಿಂಗ್ ಜಂಕ್ಷನ್ ರಸ್ತೆಗೆ ಸೇರುವ ಬಲಭಾಗದ ಎಲ್ಲಾ ಮನೆಗಳು ಸೇರಿ ರಾಡ್ರಿಗಸ್ ಬಿಲ್ಡಿಂಗ್ ಬಲಭಾಗಕ್ಕೆ ತಿರುಗಿ ಎಸ್.ಪಿ. ಬಂಗ್ಲೆ ಸೇರಿ ರೇಸ್‌ಕೋರ್ಸ್ ರಸ್ತೆ ರಾಜಸೀಟ್ ಮಾರ್ಗವಾಗಿ ಪ್ರಾರಂಭದ ಸ್ಥಳಕ್ಕೆ ಸೇರುವುದು. ಎಡಕ್ಕೆ ತಿರುಗಿ ಹಳೇ ಇಂಡಿಯನ್ ಗ್ಯಾಸ್ ಆಫೀಸ್ ಸೇರಿಕೊಂಡು ಅದೇ ರಸ್ತೆಯಲ್ಲಿ ನೇರವಾಗಿ ಮುಂದುವರೆದು ರೇಸ್‌ಕೋರ್ಸ್ ರಸ್ತೆ ಸೇರಿ ಬಲಕ್ಕೆ ತಿರುಗಿ ಲೀ ಕೂರ್ಗ್ ಕಟ್ಟಡ ಸೇರಿ ಶ್ರೀಮತಿ ಲಕ್ಷ್ಮಿ ಮನೆ ಸೇರಿಕೊಂಡು ರೇಸ್‌ಕೋರ್ಸ್ ರಸ್ತೆಯಲ್ಲೇ ಮುಂದುವರೆದು ಕೂರ್ಗ್ ಸರ್ವಿಸ್ ಸ್ಟೇಷನ್ ಮುಂಭಾಗ ಕಾಲುದಾರಿ ಮೂಲಕ ಮುಂದುವರಿದು ಪ್ರಾರಂಭದ ಸ್ಥಳಕ್ಕೆ ಸೇರುವುದು (ಈ ವಾರ್ಡಿನ ಬಲಬದಿ ಪ್ರದೇಶ ಮಾತ್ರ)<br>**ಉತ್ತರಕ್ಕೆ** : ವಾರ್ಡ್ ನಂ 18, 16<br>**ದಕ್ಷಿಣಕ್ಕೆ** : ನಗರಸಭಾ ಸರಹದ್ದು, ಮದೆ ಗ್ರಾಮ ಪಂಚಾಯಿತಿ<br>**ಪೂರ್ವಕ್ಕೆ** : ವಾರ್ಡ್ ನಂ 15, 21,<br>**ಪಶ್ಚಿಮಕ್ಕೆ** : ವಾರ್ಡ್ ನಂ 19 | |
| **21** | **ಮಡಿಕೇರಿ–21** (ಬ್ಲಾಕ್ ನಂ 14 ಭಾಗಶಃ, ಇಂದಿರಾನಗರ, ಚಾಮುಂಡೇಶ್ವರಿ ನಗರ) | ಕುಂದುರುಮೊಟ್ಟೆ ದೇವಾಲಯದಿಂದ ಚಾಮುಂಡೇಶ್ವರಿ ನಗರ ರಸ್ತೆಯಲ್ಲಿ ಮೊದಲ ಕ್ರಾಸ್ ರಸ್ತೆಗೆ ಇಳಿದು (ಕೆ.ಇ.ಬಿ. ಬಲರಾಮ ಮನೆಯ ಮುಂಭಾಗದ ರಸ್ತೆ ಬದಿಯ ಪ್ರದೇಶ) ಬಲಭಾಗದ ಮನೆಗಳು ಸೇರಿ ಅದೇ ರಸ್ತೆಯಲ್ಲಿ ಮಂಗಳೂರು ರಸ್ತೆಗೆ ತಲುಪಿ ನೇತಾಜಿ ಯುವಕ ಸಂಘದ ಕಟ್ಟಡ ಬಿಟ್ಟು ಎಡಬದಿಯಲ್ಲಿ ನಗರಸಭೆ ಸರಹದ್ದು ಮೂಲಕ ಚಾಮುಂಡೇಶ್ವರಿನಗರ ಸೇರಿ ಕೊಂಡಂತೆ ನೀರಿನ ಟ್ಯಾಂಕ್ ಸೇರಿಕೊಂಡು ಬಲಕ್ಕೆ ತಿರುಗಿ ಎಸ್.ಜೆ.ಎಸ್.ಆರ್.ವೈ. ಕಟ್ಟಡದ ಮುಂಭಾಗದ ರಸ್ತೆಯಲ್ಲಿ ಬಂದು ಕುಂದೂರುಮೊಟ್ಟೆ ದೇವಸ್ಥಾನ ತಲುಪುವುದು. (ಬಲಭಾಗದ ಪ್ರದೇಶ ಮಾತ್ರ)<br>**ಉತ್ತರಕ್ಕೆ** : ವಾರ್ಡ್ ನಂ 20<br>**ದಕ್ಷಿಣಕ್ಕೆ** : ನಗರಸಭಾ ಸರಹದ್ದು, ಮದೆ ಗ್ರಾಮ ಪಂಚಾಯಿತಿ<br>**ಪೂರ್ವಕ್ಕೆ** : ವಾರ್ಡ್ ನಂ 22<br>**ಪಶ್ಚಿಮಕ್ಕೆ** : ವಾರ್ಡ್ ನಂ 20 | ಸಾಮಾನ್ಯ ಮಹಿಳೆ |
| **22** | **ಮಡಿಕೇರಿ–22** (16 ಮತ್ತು 14 ಭಾಗಶಃ, | ಜಿ.ಟಿ. ಸರ್ಕಲ್‌ನಿಂದ ಮೂರ್ನಾಡು ರಸ್ತೆಯಾಗಿ ಡಾ॥ ಅಬೂಬಕ್ಕರ್ ಮನೆ ಕಾಲುದಾರಿ ಹತ್ತಿ ಬಲ ಬದಿ ಪ್ರದೇಶ ಸೇರಿ ಲಯನ್ಸ್ ಕ್ಲಬ್ ಸಭಾ ಭವನ ಬಳಿ ಜಿ.ಟಿ. ರಸ್ತೆ ಮೈಸೂರು ರಸ್ತೆ ಸೇರಿ ಬಲಕ್ಕೆ ತಿರುಗಿ ಬಲಭಾಗದ | ಹಿಂದುಳಿದ ವರ್ಗ (ಬಿ) |

| ಕ್ರ. ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| | ಮಂಗಳಾದೇವಿ ನಗರ, ಮೂರ್ನಾಡು ರಸ್ತೆ, ಮಂಗಳೂರು ರಸ್ತೆ, ಇಂದಿರಾ ನಗರ ಭಾಗಶಃ) | ಎ.ಪಿ.ಎಂ.ಸಿ. ಎಕ್ಸೆಲ್ ಟಯರ್ ಕಟ್ಟಡಗಳು ಸೇರಿಕೊಂಡಂತೆ ರೋಷನಾರ ರಸ್ತೆಗೆ ಬಲಭಾಗದ ಎಲ್ಲಾ ಪ್ರದೇಶ ಸೇರಿ ನಗರಸಭಾ ಸದಸ್ಯರಾಗಿದ್ದ ಶ್ರೀಮತಿ ರಮಾಮಣಿ ಮನೆ ಸೇರಿ ಅದೇ ರಸ್ತೆಯಲ್ಲಿ ಮುಂದುವರಿದು ಮೂರ್ನಾಡು ರಸ್ತೆಗೆ ಇಳಿದು ಶ್ರೀ ಶರೀನ್ ಮನೆ ಸೇರಿಸಿಕೊಂಡು ಎಡಬದಿಯ ಪ್ರದೇಶ ಸೇರಿ ನಗರಸಭೆ ಸರಹದ್ದಿನ ಮೂಲಕ ಮಂಗಳೂರು ರಸ್ತೆಗೆ ತಲುಪಿ ನೇತಾಜಿ ಯುವಕ ಸಂಘ ಬಳಿ ಬಲಕ್ಕೆ ತಿರುಗಿ ಬಲಭಾಗದ ಪ್ರದೇಶ ಮಾತ್ರ ಸೇರಿಕೊಂಡು ಕ್ರೀಸ್ಟಿ ಮನೆ ಮತ್ತು ಕೆ.ಇ.ಬಿ. ಬಲರಾಮ ಮನೆ ಸೇರಿ ಕುಂದೂರುಮೊಟ್ಟೆ ಟೆಂಪಲ್ ಬಳಿ ಬಲಬದಿಗಾಗಿ ರಾಜಸೀಟ್ ಆವರಿಸಿಕೊಂಡು ಮುಂದಕ್ಕೆ ಡಿ.ಸಿ.ಸಿ. ಬ್ಯಾಂಕ್ ಸೇರಿ ಕೊಂಡು ಜಿ.ಟಿ. ಸರ್ಕಲ್ ಬಳಿ ಸೇರುವುದು.<br>**ಉತ್ತರಕ್ಕೆ** : ವಾರ್ಡ್ ನಂ 14, 15<br>**ದಕ್ಷಿಣಕ್ಕೆ** : ನಗರಸಭೆ ಸರಹದ್ದು, ಮದೆ ಗ್ರಾಮ ಪಂಚಾಯಿತಿ<br>**ಪೂರ್ವಕ್ಕೆ** : ವಾರ್ಡ್ ನಂ 23<br>**ಪಶ್ಚಿಮಕ್ಕೆ** : ವಾರ್ಡ್ ನಂ 21 | |
| 23 | **ಮಡಿಕೇರಿ–23**<br>(ಬ್ಲಾಕ್ ನಂ 19, 18, 16 ಭಾಗಶಃ, ಅಶೋಕ ಪುರ, ಡಿ.ಸಿ.ಬಾಂಗ್ಲೇ, ಬಿ.ಡಿ.ಓ.ಕಛೇರಿ ಆವರಣ) | ಮೂರ್ನಾಡು ರಸ್ತೆ ಬಲಬದಿ ಉಸ್ಮಾನ್ ಹಾಜಿ ಮನೆಯಿಂದ ಹೊರಟು ಎರಡು ಬದಿ ಮನೆಗಳನ್ನು ಸೇರಿ ತೋಡು ದಾಟಿ ಮೇಲಕ್ಕೆ ಹತ್ತಿ, ಶೇಖ್ ಮನೆ ಸೇರಿ ಮುಂದಕ್ಕೆ ಮೇಲೆ ಕಾಲುದಾರಿ ಮೂಲಕ ಬೆಟ್ಟ ಹತ್ತಿ ನಗರಸಭೆ ಮಾಜಿ ಸದಸ್ಯರಾದ ಶ್ರೀ ರಮಾಮಣಿ ಮನೆ ಮುಂದುಗಡೆ ಬಲಭಾಗ ಸೇರಿ ರೋಶನಾರ ರಸ್ತೆಯಾಗಿ ಬಲಭಾಗ ಮನೆಗಳನ್ನು ಸೇರಿಕೊಂಡು ಶ್ರೀಮತಿ ಸುಮಾವಸಂತ್ ಮನೆ ಮುಂದಿನ ರಸ್ತೆ ಬಲಭಾಗದ ಮನೆಗಳು ಸೇರಿಕೊಂಡು ಜಯನಗರ ಉಣ್ಣಿಕೃಷ್ಣರವರ ಮನೆ ಎದುರು ಭಾಗ ಸುದರ್ಶನ ರಸ್ತೆಗಾಗಿ ತಿರುಗಿ ಮುಂದೆ ಹೋಗಿ ಬಿದ್ದಪ್ಪ ಲಾಯರ್ ಮನೆ ಹತ್ತಿರ ಹಿಂಬದಿ ಕಾಲುದಾರಿಗಾಗಿ ವರ್ಗಿಸ್ ಮನೆಯಿಂದ ಚಾಮರಾಜ ಬಂಗ್ಲೆ ಮುಖ್ಯ ರಸ್ತೆ ಸೇರಿ ಬಲಭಾಗದ ಬಡೆಸಾಬ್ ಆವರಣಕ್ಕಾಗಿ ಬಾವಿ ಮುಖಾಂತರ ಕೃಷ್ಣಪ್ಪರವರ ಮನೆ ಬಿಟ್ಟು ಪಿ.ಡಬ್ಲ್ಯೂ.ಡಿ. ವಸತಿಗೃಹಕ್ಕಾಗಿ, ಮದ್ಯ ಭಾಗಕ್ಕಾಗಿ, ಮೈಸೂರು ರಸ್ತೆ ಸೇರಿ ಮುಂದೆ ಕೆ.ಎಸ್. ಗಣಪತಿ ಮನೆ ಸೇರಿಸಿಕೊಂಡು ಪುನಃ ಎಡಕ್ಕೆ ತಿರುಗಿ ಎಡಬದಿ ಎಲ್ಲಾ ಮನೆಗಳನ್ನು ಸೇರಿಸಿಕೊಂಡು ಬಿ.ಡಿ.ಓ. ಕಛೇರಿ ಸುತ್ತಮುತ್ತ ಎಲ್ಲಾ ಮನೆಗಳು ಸೇರಿ ಜಿಲ್ಲಾಧಿಕಾರಿಗಳ ಬಂಗ್ಲೆ ಸೇರಿ ಅಶೋಕಪುರ ಎಲ್ಲಾ ಮನೆಗಳು ಸೇರಿಸಿಕೊಂಡು ಮೈಕ್ರೊ ಟವರ್‌ನಿಂದ ನಗರಸಭೆ ಸರಹದ್ದು ಮೂಲಕ ಮೂರ್ನಾಡು ರಸ್ತೆ ಉಸ್ಮಾನ್ ಹಾಜಿ ಮನೆ ಸೇರುವುದು.<br>**ಉತ್ತರಕ್ಕೆ** : ನಗರಸಭಾ ಸರಹದ್ದು, ಕಡಗದಾಳು ಗ್ರಾಮ ಪಂಚಾಯಿತಿ<br>**ದಕ್ಷಿಣಕ್ಕೆ** : ನಗರಸಭಾ ಸರಹದ್ದು, ಮೇಕೇರಿ ಗ್ರಾಮ ಪಂಚಾಯಿತಿ<br>**ಪೂರ್ವಕ್ಕೆ** : ನಗರಸಭಾ ಸರಹದ್ದು, ಮದೆ ಗ್ರಾಮ ಪಂಚಾಯಿತಿ<br>**ಪಶ್ಚಿಮಕ್ಕೆ** : ವಾರ್ಡ್ ನಂ 13, 14, 22 | ಪರಿಶಿಷ್ಟ ಜಾತಿ |

**ಕೆ.ಎಲ್. ಬಾಗಲವಾಡೆ**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 50

RNI No. KARBIL/2001/47147

2018

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**



| ಭಾಗ-III | ಬೆಂಗಳೂರು, ಮಂಗಳವಾರ, ಜುಲೈ ೩೧, ೨೦೧೮ (ಶ್ರಾವಣ ೯, ಶಕ ವರ್ಷ ೧೯೪೦) | ನಂ. ೧೧೭೧ |
|---|---|---|
| Part–III | Bengaluru, Tuesday, July 31, 2018 (Shravana 9, Shaka Varsha 1940) | No. 1171 |



ನಗರಾಭಿವೃದ್ಧಿ ಇಲಾಖೆ

ಅಧಿಸೂಚನೆ

ಸಂಖ್ಯೆ:ನಅಇ 57 ಎಂಎಲ್ಆರ್ 2018(2), ಬೆಂಗಳೂರು, ದಿನಾಂಕ: 30–07–2018

ಸರ್ಕಾರದ ಮಾರ್ಗಸೂಚಿ ಸಂಖ್ಯೆ: ನಅಇ 240 ಎಂಎಲ್ಆರ್ 2013 ದಿನಾಂಕ:18.12.2013 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ:ನಅಇ 21 ಎಂಎಲ್ಆರ್ 2016 ದಿನಾಂಕ:09.02.2016ರಲ್ಲಿ ಸ್ಪಷ್ಟಪಡಿಸಿರುವಂತೆ, ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 13 ರನ್ವಯ (Karnataka Act 22 of 1964) ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 13 ಶಾಸನ 2012, ಬೆಂಗಳೂರು, ದಿನಾಂಕ:30.08.2012 ರನ್ವಯ (Karnataka Act No. 32 of 2012) ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು **ವಿರಾಜಪೇಟೆ ಪಟ್ಟಣ ಪಂಚಾಯಿತಿಯ** ವಾರ್ಡುವಾರು ಮೀಸಲಾತಿಯನ್ನು ನಿಗಧಿಪಡಿಸಿ ಕರಡು ಅಧಿಸೂಚನೆಯನ್ನು ಕರ್ನಾಟಕ ವಿಶೇಷ ರಾಜ್ಯ ಪತ್ರ ಭಾಗ–III, ದಿನಾಂಕ:25.05.2018 ರಂದು ಪ್ರಕಟಿಸಿ, ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಸದರಿ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 7 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತ ಮೂಲಕ ಸಲ್ಲಿಸಲು ಆಹ್ವಾನಿಸಲಾಗಿತ್ತು.

ಸದರಿ ರಾಜ್ಯ ಪತ್ರವನ್ನು ಪ್ರಕಟಿಸಿದ ದಿನಾಂಕದಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿದೆ.

ನಿಗಧಿತ ಅವಧಿಯಲ್ಲಿ ಕೆಲವೊಂದು ಸಲಹೆಗಳು/ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಸದರಿ ಸಲಹೆ/ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿದೆ.

ಕರ್ನಾಟಕ ಪುರಸಭೆ ಕಾಯ್ದೆ 1964 ರ ಕಲಂ 13ರನ್ವಯ (Karnataka Act 22 of 1964) ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು **ಕೊಡಗು ಜಿಲ್ಲೆಯ ವಿರಾಜಪೇಟೆ ಪಟ್ಟಣ ಪಂಚಾಯಿತಿಯ** ವಾರ್ಡುಗಳ ಮೀಸಲಾತಿಯನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ.

1. **ವಿರಾಜಪೇಟೆ ಪಟ್ಟಣ ಪಂಚಾಯಿತಿಯ** ವಾರ್ಡುಗಳ ಸಂಖ್ಯೆ: **18 (ಹದಿನೆಂಟು)**
2. ಪ್ರತಿ ವಾರ್ಡುಗಳ ವ್ಯಾಪ್ತಿಯ ವಿವರಗಳನ್ನು ಅನುಬಂಧದ ಕಲಂ 3 ರಲ್ಲಿ ಸ್ಪಷ್ಟಪಡಿಸಲಾಗಿದೆ.
3. ಪ್ರತಿ ವಾರ್ಡಿಗೆ ತಲಾ ಒಂದು ಸ್ಥಾನವನ್ನು ಮೀಸಲಿಡಲಾಗಿದೆ.
4. ಪ್ರತಿ ವಾರ್ಡಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ/ ಸಾಮಾನ್ಯ ಸ್ಥಾನವನ್ನು ಮತ್ತು ಆಯಾ ವರ್ಗದ ಮಹಿಳೆಯರ ಸ್ಥಾನವನ್ನು ಅನುಬಂಧದ ಕಲಂ 4 ರಲ್ಲಿ ನಿಗದಿಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ಎಲ್. ಬಾಗಲವಾಡೆ**
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

# ಅನುಬಂಧ

## ವಿರಾಜಪೇಟೆ ಪಟ್ಟಣ ಪಂಚಾಯತಿ

| ಕ್ರ ಸಂ | ವಾರ್ಡ್ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| 1 | **ವಿರಾಜಪೇಟೆ-1** (ಚರ್ಚ್ ರಸ್ತೆ) | ದರ್ಶನ್ ಜ್ಯುವೆಲ್ಲರ್ಸ್ ವೃತ್ತದಿಂದ ಎಡಕ್ಕೆ ಪ್ರಾರಂಭಿಸಿ ಮೂರ್ನಾಡು ರಸ್ತೆ ಛತ್ರಕೆರೆ ತಂಗುದಾಣದಿಂದ ಬಲಕ್ಕೆ ತಿರುಗಿ ಸಂತ ಅನ್ನಮ್ಮ ಶಾಲೆಯ ರಸ್ತೆ ಎರಡು ಬದಿ ಸೇರಿ ಶಾಂತ ಚಿತ್ರಮಂದಿರವರೆಗೆ. ಶಾಂತ ಚಿತ್ರ ಮಂದಿರದಿಂದ ಎಡಕ್ಕೆ ತಿರುಗಿ (ಎರಡು ಬದಿ) ರಾಮಯ್ಯನವರ ಮನೆವರೆಗೆ ಅಲ್ಲಿಂದ ದೇವಾಂಗ ಬೀದಿ ಬಲಭಾಗಕ್ಕಾಗಿ ಸಿದ್ದಾಪುರ ರಸ್ತೆ, ರಾಷ್ಟ್ರ ಬಂಧು ಮನೆಗೆ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ರಸ್ತೆಯ ಬಲಭಾಗಕ್ಕಾಗಿ ಪ್ರಾರಂಭದ ದರ್ಶನ್ ಜ್ಯುವೆಲ್ಲರ್ಸ್ ಸೇರುವುದು.<br>ಪೂರ್ವಕ್ಕೆ : ಸಿದ್ದಾಪುರ ಮುಖ್ಯ ರಸ್ತೆ<br>ಪಶ್ಚಿಮಕ್ಕೆ : ಸಂತ ಅನ್ನಮ್ಮ ಶಾಲೆ ತೋಡು<br>ಉತ್ತರಕ್ಕೆ : ವಾರ್ಡ್ (3) ಹಳೆಯ ಶಾಂತಿ ಜಯರಾಮ್ ಮನೆ<br>ದಕ್ಷಿಣಕ್ಕೆ : ಮೂರ್ನಾಡು ರಸ್ತೆ. | ಹಿಂದುಳಿದ ವರ್ಗ (ಎ) ಮಹಿಳೆ |
| 2 | **ವಿರಾಜಪೇಟೆ-2** (ದೇವಾಂಗ ಬೀದಿ) | ಅಪ್ಪಯ್ಯ ಸ್ವಾಮಿ ರಸ್ತೆ ಜೋಸೆಫ್ ಮನೆಯಿಂದ ರೋಹಿಣಿ ಮನೆ ಒಳಗೊಂಡಂತೆ ಸಿ.ಸಿ.ಚೆಂಗಪ್ಪ ಮನೆಗಾಗಿ ಪುರಸಭಾ ವಾರ್ಡ್ 3 ರ ಸರಹದ್ದಿಗಾಗಿ ಅರಸುನಗರಕ್ಕೆ ಹೋಗಿ ಗಡಿಭಾಗದವರೆಗೆ. ಜೋಸೆಫ್ ಮನೆಯಿಂದ ಬಲಕ್ಕೆ ತಿರುಗಿ ದೇವಾಂಗ ಬೀದಿಗಾಗಿ ರಸ್ತೆ ಎಡಭಾಗಕ್ಕಾಗಿ ರೋಲಿಕ್ ಶಾಲೆ ವೃತ್ತದಿಂದ ಎಡಕ್ಕೆ ತಿರುಗಿ ಅರಸುನಗರ ರಸ್ತೆಗಾಗಿ ಫೆಡರೇಶನ್ ಮಿಲ್‌ನ ವೃತ್ತದಲ್ಲಿ ಬಲಕ್ಕೆ ತಿರುಗಿ ದಖ್ಖನಿ ಮೊಹಲ್ಲ ರಸ್ತೆ ಎಡಭಾಗದ ಮನೆಗಳನ್ನು ಸೇರಿಸಿ ಪ್ರಗತಿ ಶಾಲೆವರೆಗೆ ಹೋಗಿ ಅಲ್ಲಿಂದ ವಿರಾಜಪೇಟೆ ಸಿದ್ದಾಪುರ ರಸ್ತೆಯ ಎಡಕ್ಕೆ ತಿರುಗಿ ನೆಲ್ಲಮಕ್ಕಡ ಮೋಹನ್ ಮನೆಗಾಗಿ ಮನೆಯ ನೇರ ಮೇಲ್ಭಾಗ ಗಡಿಭಾಗ ಸೇರುವುದು.<br>ಉತ್ತರಕ್ಕೆ : ಗಡಿಭಾಗ<br>ಪೂರ್ವಕ್ಕೆ : ಗಡಿಭಾಗ<br>ದಕ್ಷಿಣಕ್ಕೆ : ಮೇಕೇರಿರ ಜಯರಾಮ್ ಮನೆ<br>ಪಶ್ಚಿಮಕ್ಕೆ : ವಾರ್ಡ್ 16. | ಸಾಮಾನ್ಯ |
| 3 | **ವಿರಾಜಪೇಟೆ-3** (ಅರಸುನಗರ) | ರೋಲಿಕ್ ಶಾಲೆ ವೃತ್ತದಿಂದ ಬಲಭಾಗದ ಮನೆಗಳನ್ನೊಳಗೊಂಡು ಫೆಡರೇಶನ್ ಮಿಲ್ ತಲುಪಿ ಅಲ್ಲಿಂದ ಬಲಭಾಗಕ್ಕೆ ತಿರುಗಿ ದಖ್ಖನಿ ಮೊಹಲ್ಲ ರಸ್ತೆ ಬಲಭಾಗದ ಮನೆಗಳನ್ನು ಸೇರಿಸಿ ಪ್ರಗತಿ ಶಾಲೆವರೆಗೆ ಹೋಗಿ ಅಲ್ಲಿಂದ ವಿರಾಜಪೇಟೆ ಸಿದ್ದಾಪುರ ರಸ್ತೆ ಎಡಕ್ಕೆ ತಿರುಗಿ ನೆಲ್ಲಮಕ್ಕಡ ಮೋಹನ್ ಮನೆ ಸೇರಿಸಿ ವಾಡ್ 2 ರ ಗಡಿ ಸೇರುವುದು. ರೋಲಿಕ್ ಶಾಲೆಯಿಂದ ದೇವಾಂಗ ಬೀದಿಯ ಎಡಭಾಗಕ್ಕೆ ತಿರುಗಿ ಮನೆಗಳನ್ನು ಒಳಗೊಂಡ ರಾಷ್ಟ್ರ ಬಂಧು ಮನೆ ಮುಂಭಾಗದ ದೇವಾಂಗ ಬೀದಿ ಅಲ್ಲಿಂದ ಎಡ ತಿರುಗಿ ಸಿದ್ದಾಪುರ ರಸ್ತೆಯ ಎಡಕ್ಕೆ ಮನೆಗಳನ್ನು ಒಳಗೊಂಡಂತೆ ಮಾರಿಯಮ್ಮ ದೇವಸ್ಥಾನ ತಲುಪಿ ಕಾಲುದಾರಿಗಾಗಿ (ಪ್ರಗತಿ ಶಾಲೆಯ ಎದುರು) ತಲುಪಿ ಸಿದ್ದಾಪುರ ರಸ್ತೆ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಅಯ್ಯಪ್ಪ ಸ್ವಾಮಿ ದೇವಸ್ಥಾನ ವಟಾರ ಸೇರಿಸಿ (ಪಿ.ಕೆ.ಎಂ. ಮತ್ತು ಕೋಮಲ ಮನೆ) ಮಗ್ಗುಲ ದೇವಸ್ಥಾನ ರಸ್ತೆಯವರೆಗೆ ಹೋಗಿ ಅಲ್ಲಿಂದ ಡೆಂಟಲ್ ಕಾಲೇಜು ವರೆಗೆ ಗಡಿ ತಲುಪುವುದು.<br>ಉತ್ತರಕ್ಕೆ : ಮಗ್ಗುಲ ಈಶ್ವರ ದೇವಸ್ಥಾನ ಗಡಿಭಾಗ<br>ದಕ್ಷಿಣಕ್ಕೆ : ಹೊಸ ವಾರ್ಡ್ 4<br>ಪೂರ್ವಕ್ಕೆ : ಮಗ್ಗುಲ ಡೆಂಟಲ್ ಕಾಲೇಜು ಗಡಿಭಾಗ<br>ಪಶ್ಚಿಮಕ್ಕೆ : ಹೊಸ ವಾರ್ಡ್ 1. | ಸಾಮಾನ್ಯ |

| ಕ್ರ ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| 4 | **ವಿರಾಜಪೇಟೆ-4** (ತೆಲುಗರ ಬೀದಿ) | ತೆಲುಗರ ಬೀದಿ ಎಮ್.ಎ.ಪೂಣಚ್ಚ ಮನೆಯಿಂದ ತೆಲುಗರ ಬೀದಿ ಮುಖ್ಯ ರಸ್ತೆಗಾಗಿ ರಸ್ತೆಯ ಬಲಭಾಗದ ಮನೆಗಳನ್ನು ಸೇರಿಸಿ ಮಾರಿಯಮ್ಮ ದೇವಸ್ಥಾನ ಮೆಟ್ಟಿಲುಗಾಗಿ ಬಲ ಮತ್ತು ಎಡ ಭಾಗದ ಮನೆಗಳನ್ನು ಸೇರಿಸಿ ಸಿದ್ದಾಪುರ ರಸ್ತೆ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ಡೆಂಟಲ್ ಕಾಲೇಜುಗಾಗಿ ಗಡಿ ತಲುಪುವುದು. (ಎಸ್.ಜೆ.ಎಸ್.ಆರ್.ವೈ. ಅಂಗನವಾಡಿ ಕಟ್ಟಡ) ತೆಲುಗರ ಬೀದಿಯ ಮುಖ್ಯ ರಸ್ತೆ ಎಮ್.ಎ.ಪೂಣಚ್ಚ ಮನೆಯಿಂದ ಕಾವೇರಿ ಕಲ್ಯಾಣ ಮಂಟಪ ರಸ್ತೆ ಎಡಭಾಗ ಮನೆಗಳನ್ನು ಸೇರಿಸಿಕೊಂಡು ಹಳೆಯ ವಾರ್ಡ್ 4ರ ಪುರಸಭಾ ಸರಹದ್ದು ಆ ಬೌಂಡರಿ ಸೇರಿಸಿ ಸುಂಕದಕಟ್ಟೆಗಾಗಿ ಡೆಂಟಲ್ ಕಾಲೇಜು ತಲುಪುವುದು (ಕಟ್ಟಿ ಪೂಣಚ್ಚ ಅರಣ್ಯ ಕಛೇರಿ, ಪಂಪ್ ಕೆರೆ ನಾಗರಾಜು ಮನೆ)<br>**ಪೂರ್ವಕ್ಕೆ** : ಮಗ್ಗುಲ ಗಡಿ<br>**ಪಶ್ಚಿಮಕ್ಕೆ** : ಹೊಸ ವಾರ್ಡ್ ನಂ. 1<br>**ಉತ್ತರಕ್ಕೆ** : ಮಗ್ಗುಲ ಈಶ್ವರ ದೇವಸ್ಥಾನ ಗಡಿಭಾಗ<br>**ದಕ್ಷಿಣಕ್ಕೆ** : ವಾರ್ಡ್ ನಂ.4 | ಪರಿಶಿಷ್ಟ ಜಾತಿ ಮಹಿಳೆ |
| 5 | **ವಿರಾಜಪೇಟೆ-5** (ಮೊಗರಗಲ್ಲಿ) | ರಾಜ್‌ಕುಮಾರ್ ಮನೆಯಿಂದ ಬಲಭಾಗಕ್ಕಾಗಿ ಮನೆಗಳನ್ನು ಒಳಗೊಂಡು ಕಾವೇರಿ ಕಲ್ಯಾಣ ಮಂಟಪ (ಗ್ಯಾರೇಜ್ ರಸ್ತೆ) ವೃತ್ತ ಬಲಕ್ಕೆ ತಿರುಗಿ ಮಂಟಪ ಸೇರಿಸಿ ಮೊಗರಗಲ್ಲಿ ರಸ್ತೆಯ ಬಲಭಾಗದ ಮನೆ ಸೇರಿಸಿ ಗೋಣಿಕೊಪ್ಪ ರಸ್ತೆ ಮಸೀದಿ ವರೆಗೆ ಅಲ್ಲಿಂದ ಮುಂದಕ್ಕೆ ಕೆ.ಎಸ್.ಆರ್.ಟಿ.ಸಿ. ಒಳಗೆ ಬಲಭಾಗ ಓಣಿಯಿಂದ ಕೃಷ್ಣ ಸ್ಟೋರ್ ಮುಖೇನ ಮುಖ್ಯ ರಸ್ತೆ ಅಲ್ಲಿಂದ ಬಲಕ್ಕೆ ತಿರುಗಿ ಎಫ್.ಎಂ.ಸಿ. ರಸ್ತೆಗಾಗಿ ರಸ್ತೆಯ ಬಲಭಾಗದ ಮನೆಗಳನ್ನು ಸೇರಿಸಿಕೊಂಡು ದೊಡ್ಡಟ್ಟಿ ಚೌಕಿ ತೆಲುಗರ ಬೀದಿಗಾಗಿ ಡಿ.ಎಂ.ರಾಜ್‌ಕುಮಾರ್ ಮನೆವರೆಗೆ.<br>**ಪೂರ್ವಕ್ಕೆ** : ಹೊಸ ವಾರ್ಡ್ ನಂ. 4<br>**ಪಶ್ಚಿಮಕ್ಕೆ** : ಗಡಿಯಾರ ಕಂಬ<br>**ಉತ್ತರಕ್ಕೆ** : ಹೊಸ ವಾರ್ಡ್ ನಂ. 3 ರ ಗಡಿ<br>**ದಕ್ಷಿಣಕ್ಕೆ** : ಮೇರಿ ಥೋಮಸ್ ಆಸ್ಪತ್ರೆ. | ಹಿಂದುಳಿದ ವರ್ಗ (ಎ) |
| 6 | **ವಿರಾಜಪೇಟೆ-6** (ಹರಿಕೇರಿ) | ಕೆ.ಎಸ್.ಆರ್.ಟಿ.ಸಿ. ಯಿಂದ ಹೊರಟು ಗೋಣಿಕೊಪ್ಪ ರಸ್ತೆಯ ಬಲಭಾಗ ಶಿವ ಪ್ರಕಾಶ್ ಹೋಟೆಲ್ ತಲುಪಿ ಬಲಕ್ಕೆ ತಿರುಗಿ ಮಾರ್ಕೆಟ್ ರಸ್ತೆಗಾಗಿ ಸುಣ್ಣದ ಬೀದಿ ರಸ್ತೆಯ ಬಲಭಾಗ ಒಳಗೊಂಡಂತೆ ಕೆ.ಪಿ.ಕೆ. ಬಲಕ್ಕೆ ಅಂಗಡಿ ತಲುಪಿ ಆರೋಮ ಲಾಡ್ಜ್ ನಿಂದ ನೋಬೆಲ್ ಹಾರ್ಡ್‌ವೇರ್ ತಲುಪಿ ಬಲಭಾಗ ಹರಿಕೇರಿ ಒಳಗೊಂಡಂತೆ ಖಾಸಗಿ ಬಸ್ ನಿಲ್ದಾಣ ರಸ್ತೆ ಬಲಭಾಗ ಸೇರಿ ಮೊಬೈಲ್ ಕಾರ್ನರ್‌ನಿಂದ ಬಲಕ್ಕೆ ತಿರುಗಿ ಮುಖ್ಯ ರಸ್ತೆ ಬಲಭಾಗ ಮನೆಗಳನ್ನು ಒಳಗೊಂಡು ಕೃಷ್ಣ ಸ್ಟೋರ್ ರಸ್ತೆಯಾಗಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಸೇರುವುದು.<br>**ಪೂರ್ವಕ್ಕೆ** : ವಾರ್ಡ್ ನಂ.7,ಮತ್ತು 8<br>**ಪಶ್ಚಿಮಕ್ಕೆ** : ವಾರ್ಡ್ ನಂ.,13, ಮತ್ತು 14<br>**ಉತ್ತರಕ್ಕೆ** : ವಾರ್ಡ್ ನಂ.5<br>**ದಕ್ಷಿಣಕ್ಕೆ** : ವಾರ್ಡ್ ನಂ.10, ಮತ್ತು 11 | ಪರಿಶಿಷ್ಟ ಜಾತಿ |
| 7 | ವಿರಾಜಪೇಟೆ-7 (ನೆಹರುನಗರ -1) | ಮೊಗರಗಲ್ಲಿ ಚಾಮುಂಡಿ ಮನೆ ಎಡಭಾಗಕ್ಕಾಗಿ ರಸ್ತೆಯಾಗಿ ಅಬ್ದುಲ್ ರೆಹಮಾನ್ ಮನೆಯವರೆಗೆ ಅಲ್ಲಿಂದ ಬಲಕ್ಕೆ ತಿರುಗಿ ನೆಹರುನಗರದ ಮನೆಗಳನ್ನು ಒಳಗೊಂಡು ಮುಫಿನಾ ಸ್ಟೋರ್‌ಗಾಗಿ ಸಿಕೆ ಮನೆ ಮುಂದೆ ಎಡಕ್ಕೆ ತಿರುಗಿ ಕೆಳಗೆ ಮೆಟ್ಟಲುಗಳನ್ನು ಇಳಿದು ಕಾವೇರಿ ಕಲ್ಯಾಣ ಮಂಟಪ ಸೇರುವುದು. ಅಲ್ಲಿಂದ ಎಡಕ್ಕೆ ತಿರುಗಿ ಮೊಗರಗಲ್ಲಿ ಚಾಮುಂಡಿ ಮನೆ ಸೇರುವುದು.<br>**ಪೂರ್ವಕ್ಕೆ** : ಸಿ.ಕೆ. ಮನೆ<br>**ಪಶ್ಚಿಮಕ್ಕೆ** : ವಾರ್ಡ್ ನಂ.18<br>**ಉತ್ತರಕ್ಕೆ** : ವಾರ್ಡ್ ನಂ.5<br>**ದಕ್ಷಿಣಕ್ಕೆ** : ನೆಹರುನಗರ ರಸ್ತೆ. | ಸಾಮಾನ್ಯ ಮಹಿಳೆ |

| ಕ್ರ ಸಂ | ವಾರ್ಡ ಸಂಖ್ಯೆ ಮತ್ತು ವಾರ್ಡನ ಪ್ರದೇಶ | ಚೆಕ್ ಬಂದಿ | ಮೀಸಲಾತಿ |
|---|---|---|---|
| 1 | 2 | 3 | 4 |
| 8 | **ವಿರಾಜಪೇಟೆ-8** (ನೆಹರುನಗರ -2) | ಕಾವೇರಿ ಕಲ್ಯಾಣ ಮಂಟಪ ಮುಂದಿನ ಗ್ಯಾರೇಜಿನಿಂದ ಪ್ರಾರಂಭಿಸಿ ರಸ್ತೆಯ ಬಲಭಾಗಕ್ಕಾಗಿ ಸಿದ್ದಾಪುರ ರಸ್ತೆ ತಲುಪಿ ಅಲ್ಲಿಂದ ಬಲಕ್ಕೆ ತಿರುಗಿ ತೆಲುಗರ ಬೀದಿಯ ಬಲಭಾಗಕ್ಕಾಗಿ ಮಾರಿಯಮ್ಮ ದೇವಸ್ಥಾನಕ್ಕೆ ಹೋಗಿ ಅಲ್ಲಿಂದ ಮುಂದಕ್ಕೆ ನೆಲ್ಲಮಕ್ಕಡ ಮೋಹನ್ ಮನೆಯ ಬಲಕ್ಕಾಗಿ ಹೋಗಿ ಮುಂದೆ ಪಂಪುಕೆರೆ ಸೇರಿ ಗಡಿ ಸರಹದ್ದು ಸೇರುವುದು ಅಲ್ಲಿಂದ ಗಡಿಭಾಗಕ್ಕಾಗಿ ಹೋಗಿ ನೆಹರುನಗರ ರೋಸಿ ಮನೆ ರಸ್ತೆಗೆ ಸೇರುವುದು ಬಲಭಾಗಕ್ಕಾಗಿ ಅಲ್ಲಿಂದ ನೆಹರುನಗರದ ಮುಖ್ಯ ರಸ್ತೆ ಮುಖಾಂತರ ಬಲಭಾಗದ ಮನೆಗಳನ್ನು ಒಳಗೊಂಡು ಕೆ.ಕೆ ರಾಜನ್‌ರವರ ಮನೆವರೆಗೆ ಅಲ್ಲಿಂದ ಎಸ್.ಜೆ.ಎಸ್.ಆರ್.ವೈ ಟ್ಯಾಂಕ್ ಕಾಮಗಾರಿ ಕೆಳಗೆ ಇಳಿದು ಜುಮಾ ಮಸೀದಿ ಸೇರಿ ಬ್ರೈಟ್ ಶಾಲೆ ಮುಂದೆ ಗೋಣಿಕೊಪ್ಪ ರಸ್ತೆ ಸೇರಿ ಅಲ್ಲಿಂದ ಬಲಕ್ಕೆ ತಿರುಗಿ ಮೇರಿ ಥೋಮಸ್ ಆಸ್ಪತ್ರೆ ಹೋಗಿ ಬಲಕ್ಕೆ ತಿರುಗಿ ಮೊಗರಗಲ್ಲಿ ನೆಹರುನಗರ ರಸ್ತೆ ಸೇರುವುದು. ಅಲ್ಲಿಂದ ಬಲಕ್ಕೆ ತಿರುಗಿ ನೆಹರುನಗರ ಬಲಭಾಗಕ್ಕಾಗಿ ಸಿ.ಕೆ.ಮನೆವರೆಗೆ ಎಡಕ್ಕೆ ತಿರುಗಿ ಕಾವೇರಿ ಕಲ್ಯಾಣ ಮಂಟಪ ಗ್ಯಾರೇಜ್ ಸೇರುವುದು.<br>**ಪೂರ್ವಕ್ಕೆ** : ಮಗ್ಗುಲ ಗಡಿ<br>**ಪಶ್ಚಿಮಕ್ಕೆ** : ಗೋಣಿಕೊಪ್ಪ ರಸ್ತೆ ವಾರ್ಡ್ ನಂ.6<br>**ಉತ್ತರಕ್ಕೆ** : ವಾರ್ಡ್ ನಂ.4, 5 ಮತ್ತು 7<br>**ದಕ್ಷಿಣಕ್ಕೆ** : ಬ್ರೈಟ್ ಶಾಲೆ. | ಹಿಂದುಳಿದ ವರ್ಗ (ಬಿ) |
| 9 | **ವಿರಾಜಪೇಟೆ-9** (ಸುಭಾಷ್ ನಗರ) | ಗೋಣಿಕೊಪ್ಪ ರಸ್ತೆ ಬ್ರೈಟ್ ಶಾಲೆಗೆ ಹೋಗುವ ದಾರಿ ಬಳಿ ಇರುವ ಶ್ರೀ.ಲಕ್ಷ್ಮಿ ಬೇಕರಿಯಿಂದ ಪಂಜರಪೇಟೆ ರಸ್ತೆ ಎಡಭಾಗ ಸುಭಾಷ್ ನಗರ ಪೂರ್ತಿ ಸೇರಿಕೊಂಡು ಪಂಜರಪೇಟೆ ಗಣಪತಿ ಬೀದಿ ಸೇರಿಕೊಂಡು ಹೊಸದಾಗಿ ಸೇರ್ಪಡೆಗೊಂಡ ನಿಸರ್ಗ ಬಡಾವಣೆ ಗಡಿಭಾಗ ಸೇರಿ ಎಡಕ್ಕೆ ತಿರುಗಿ ನೆಹರುನಗರದ ಎಸ್.ಜೆ.ಎಸ್.ಆರ್.ವೈ ಕಟ್ಟಡಕ್ಕಾಗಿ ಮುಂದಕ್ಕೆ ಎಸ್.ಜೆ.ಎಸ್.ಆರ್.ವೈ ನೀರಿನ ಟ್ಯಾಂಕ್‌ಗೆ ಬಂದು ಸೇರುವುದು. ಅಲ್ಲಿಂದ ರೋಸಿ ಮನೆ ರಸ್ತೆ ಮುಖಾಂತರ ಗಡಿಭಾಗ, ಅಲ್ಲಿಂದ ಗಡಿಭಾಗಕ್ಕಾಗಿ ಗೋಣಿಕೊಪ್ಪ ರಸ್ತೆ ಸೇರುವುದು.<br>**ಪೂರ್ವಕ್ಕೆ** : ಮಗ್ಗುಲ ಗಡಿಭಾಗ<br>**ಪಶ್ಚಿಮಕ್ಕೆ** : ವಾರ್ಡ್ ನಂ.11 ಗಡಿಭಾಗ<br>**ಉತ್ತರಕ್ಕೆ** : ವಾರ್ಡ್ ನಂ.8<br>**ದಕ್ಷಿಣಕ್ಕೆ** : ವಾರ್ಡ್ ನಂ.10. | ಸಾಮಾನ್ಯ |
| 10 | **ವಿರಾಜಪೇಟೆ-10** (ನಿಸರ್ಗ ಲೇಔಟ್) | ನಿಸರ್ಗ ಗಡಿಭಾಗದಿಂದ ಹೊರಟು ಎಡಭಾಗಕ್ಕಾಗಿ ಮೋಹನ್ ಮನೆಯಿಂದ ನಿಸರ್ಗ ಲೇಔಟ್ ಒಳಗೊಂಡು ಗಣಪತಿ ಬೀದಿಯನ್ನೊಳಗೊಂಡು ನೆಹರುನಗರ ಕೊನೆಯವರೆಗೆ ಅಲ್ಲಿಂದ ಎಡಕ್ಕೆ ತಿರುಗಿ ವಾಸು ಅಂಗಡಿಗಾಗಿ ಕೆಳಗೆ ಸುಭಾಷ್ ನಗರವನ್ನೊಳಗೊಂಡು ಗೋಣಿಕೊಪ್ಪ ರಸ್ತೆಗಾಗಿ ಎಡಭಾಗವನ್ನೊಳಗೊಂಡಂತೆ ನಿಸರ್ಗ ಲೇಔಟ್ ಗಡಿ ತಲುಪುವುದು.<br>**ಪೂರ್ವಕ್ಕೆ** : ಮಗ್ಗುಲ ಗಡಿಭಾಗ<br>**ಪಶ್ಚಿಮಕ್ಕೆ** : ಅಂಬಟ್ಟಿ ಗಡಿಭಾಗ<br>**ಉತ್ತರಕ್ಕೆ** : ವಾರ್ಡ್ ನಂ.9<br>**ದಕ್ಷಿಣಕ್ಕೆ** : ಅಂಬಟ್ಟಿ ಗಡಿಭಾಗ ಕಾವೇರಿ ಕಾಲೇಜು ಹತ್ತಿರ. | ಹಿಂದುಳಿದ ವರ್ಗ (ಎ) ಮಹಿಳೆ |
